| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3<br>EVS - 23 | | ಪರಿಸರ ಅಧ್ಯಯನ<br>ನಮ್ಮ ದೇಹ | ದೇಹದ ಭಾಗಗಳನ್ನು ಗುರುತಿಸುವರು | | **ಸೂಚನೆ :** ಸಾಮರ್ಥ್ಯ ಎರಡೂ ತರಗತಿಗೆ ಹೊಂದಾಣಿಕೆಯಾಗುವುದರಿಂದ ಎರಡೂ ತರಗತಿ ಪಾಠ ಮುಂದುವರೆಯುತ್ತದೆ. | | ಪರಿಸರ ಅಧ್ಯಯನ<br>ನಮ್ಮ ದೇಹದ ಭಾಗಗಳು | ನಮ್ಮ ದೇಹದ ಭಾಗಗಳನ್ನು ಗುರುತಿಸುವರು ಮತ್ತು ಅವುಗಳ ಕೆಲಸಗಳನ್ನು ತಿಳಿಯುವರು. | | | |
| | 30 ನಿ | | | ಗೆಜ್ಜೆ, ಹೂವು, ಪುಸ್ತಕ ಇತ್ಯಾದಿ | ಶಿಕ್ಷಕ | * ಎರಡೂ ತರಗತಿ ಮಕ್ಕಳನ್ನು ಕೂರಿಸಿಕೊಂಡು ತಲೆಯ ಭಾಗದಲ್ಲಿರುವ ಅಂಗಗಳನ್ನು ತೋರಿಸುತ್ತಾ ಅವುಗಳನ್ನು ಹೆಸರಿಸುವಂತೆ ತಿಳಿಸಿ ಉತ್ತರ ಪಡೆಯುವರು. ನಂತರ ಶಬ್ದ, ಸ್ಪರ್ಶ, ವಾಸನೆ, ನೋಟ ಇವುಗಳನ್ನು ಹೇಗೆ ತಿಳಿಯುತ್ತೇವೆ ಎಂಬುದಕ್ಕೆ ಚಟುವಟಿಕೆ ಮಾಡಿಸುವರು.<br>* ಕಣ್ಣು, ಕಿವಿ, ಮೂಗು, ಚರ್ಮ ಇವುಗಳ ಮಹತ್ವ ತಿಳಿಸುವುದು. (ವಿವಿಧ ಚಿತ್ರಪಟಗಳನ್ನು ಬಳಸುವುದು). | | | | | |
| | 10 ನಿ | | | | ಹಿರೇಮಣಿ | ಎರಡನೇ ತರಗತಿ ಮಕ್ಕಳನ್ನು ಬೇರ್ಪಡಿಸಿ ಪಠ್ಯಪುಸ್ತಕ ಪುಟ – 23 ರಲ್ಲಿರುವ ದೇಹದ ತಲೆಯ ಭಾಗದ ಚಿತ್ರ ಬರೆಯಲು ತಿಳಿಸುವರು. | | | ಕಾಲನ್ನು ಉಪಯೋಗಿಸಿ ಮಾಡುತ್ತಿರುವ ಕೆಲಸಗಳ ಚಿತ್ರಪಟ<br>ಕಾಲಿನ ಚಿತ್ರ ಪಟ | ಶಿಕ್ಷಕ | 2ನೇ ತರಗತಿ ಮಕ್ಕಳಿಗೆ ಕಲಿಕಾಂಶ ಮುಂದುವರೆಸುವರು. |
| | 35 ನಿ | | | | ಸ್ವಕಲಿಕೆ | ಮಕ್ಕಳು ಮೇಲಿನ ಚಟುವಟಿಕೆಯಲ್ಲಿ ತೊಡಗುವರು. | | | | | * ಕಾಲನ್ನು ಉಪಯೋಗಿಸಿ ಕೆಲಸ ಮಾಡುತ್ತಿರುವ ವಿವಿಧ ಚಿತ್ರಗಳನ್ನು ತೋರಿಸಿ ಕಾಲಿನಿಂದ ಮಾಡುವ ಕೆಲಸಗಳನ್ನು ಹೇಳಿಸುವರು. ಕಾಲಿನ ಚಿತ್ರ ಹಾಗೂ ನೈಜ ಮಾದರಿ ಪ್ರದರ್ಶಿಸಿ ಕಾಲಿನ ಭಾಗಗಳನ್ನು ಪರಿಚಯಿಸುವರು.<br>* ದೇಹದ ವಿವಿಧ ಅಂಗಗಳ ಮಹತ್ವವನ್ನು ಹಾಗೂ ಅವುಗಳ ಕಾರ್ಯಗಳನ್ನು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವ ಮೂಲಕ ಮನದಟ್ಟು ಮಾಡುವರು. |
| | 05 ನಿ | | | | | ಮೇಲಿನ ಚಟುವಟಿಕೆಗಳನ್ನು ಪರಿಶೀಲಿಸಿ ಮುಂದಿನ ಅವಧಿಗೆ ಸಿದ್ಧತೆ ಮಾಡಿಕೊಳ್ಳುವರು. | | | | | |

**"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4 | 10 ನಿ | ಸಾ. ಉ. ಉ. ಕಾರ್ಯ<br>ಮಣ್ಣಿನಿಂದ ಸಣ್ಣ ಸಣ್ಣ ಗೊಂಬೆಗಳ ತಯಾರಿಕೆ | ಮಕ್ಕಳು ಮಣ್ಣಿನಿಂದ ಸಣ್ಣ ಸಣ್ಣ ಗೊಂಬೆಗಳನ್ನು ತಯಾರಿಸುವ ಕೌಶಲ್ಯ ಬೆಳೆಸಿಕೊಳ್ಳುವರು. | ಅಭಿನಯ ಗೀತೆ | ಶಿಕ್ಷಕ | ಮೊದಲಿಗೆ ಶಿಕ್ಷಕರು ಎರಡೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿಕೊಂಡು ಸಾಮೂಹಿಕವಾಗಿ ಅಭಿನಯ ಗೀತೆ ಹೇಳಿಕೊಡುವರು<br>"ಚನ್ನಪಟ್ಟಣದ ಅಂದದ ಗೊಂಬೆ..............................<br>.........................................................................." | | | | | ಎರಡನೇ ತರಗತಿಯ ಮಕ್ಕಳು ಒಂದನೇ ತರಗತಿಯಲ್ಲಿ ವಿವರಿಸುವಂತೆ ಚಟುವಟಿಕೆಯಲ್ಲಿ ಕೂಡಾ ಸಾಮರ್ಥ್ಯಗಳಿಸುವರು. |
| | 10 ನಿ | | | ಮಣ್ಣು<br>ನೀರು,<br>ಗೊಂಬೆಗಳ ಮಾದರಿಗಳು | ಶಿಕ್ಷಕ | ಎರಡೂ ತರಗತಿಯುನ್ನು ಶಾಲಾ ಹೊರಗಡೆ ಕರೆದುಕೊಂಡು ಹೋಗಿ ಆವರಣದಲ್ಲಿ ಕುಳಿತುಕೊಳ್ಳುವಂತೆ ತಿಳಿಸಿ ಮೊದಲೇ ಸಂಗ್ರಹಿಸಿ ತಂದಿರುವ ಮಣ್ಣನ್ನು ನೀರಿನಿಂದ ಕಲೆಸುವಂತೆ ತಿಳಿಸುವರು. | | | | | |
| | 50 ನಿ | | | | ಗುಂಪು ಕಲಿಕೆ | ಮಕ್ಕಳನ್ನು 4–5ರಂತೆ ಗುಂಪುಗಳಾಗಿ ವಿಂಗಡಿಸಿ ಅಗತ್ಯವಾದ ಕಲೆಸಿರುವ ಮಣ್ಣನ್ನು ನೀಡಿ ಅವರಿಗೆ ಗೊತ್ತಿರುವ ಮಣ್ಣಿನ ಮಾದರಿಗಳನ್ನು ಮಾಡಿಸಲು ತಿಳಿಸುವರು.<br>ಉದಾ : ಬಂಡಿಗಾಲಿ, ಸರಳ ಗೊಂಬೆಗಳು, ಚಕ್ರಗಳು, ರೊಟ್ಟಿಗಳ ಮಾದರಿಗಳು ಇತ್ಯಾದಿ ವಸ್ತುಗಳನ್ನು ಮಾಡಿಸಿ ಬಿಸಿಲಿನಲ್ಲಿ ಒಣಗಿಸುವರು. | | | | | |
| | 10 ನಿ | | | | ಶಿಕ್ಷಕ | ಮೇಲೆ ತಿಳಿಸಿರುವಂತೆ ಮಣ್ಣಿನ ಮಾದರಿಗಳನ್ನು ಸಂಗ್ರಹಿಸಿ ಸುರಕ್ಷಿತ ಸ್ಥಳದಲ್ಲಿ ಇಡುವಂತೆ ತಿಳಿಸುವರು ಶಿಕ್ಷಕರು ಮಾರ್ಗದರ್ಶನ ನೀಡುವರು. | | | | | |

(**ಸೂಚನೆ** : * ಮುಂದಿನ S.U.P.W. ಅವಧಿಗೆ ಪೂರಕವಾಗಿ ಸ್ಥಳೀಯವಾಗಿ ದೊರೆಯುವ ಪಕ್ಷಿಗಳ ಗರಿಗಳನ್ನು ಸಂಗ್ರಹಿಸಿ ತರಲು ತಿಳಿಸುವರು)

**"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **1** KAN 37½ | 10 ನಿ | ಕನ್ನಡ ಸಣ್ಣಿ ಮದುವೆ | ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸಗಳು, ಗೀತೆಗಳು ಮತ್ತು ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥ ಮಾಡಿಕೊಳ್ಳುವುದು. | ಪಠ್ಯ ಪುಸ್ತಕ | ಶಿಕ್ಷಕ | ಹಿರೇಮಣಿಯ ನೇತೃತ್ವದಲ್ಲಿ ಪದ್ಯ ಹೇಳಿಸಲು ತಿಳಿಸುವರು. | ಕನ್ನಡ ಹಾವಿನ ಹಾಡು | ಹಾಡುಗಳು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವುದು | | ಶಿಕ್ಷಕ | ಹಾವಿನ ಹಾಡು ಪದ್ಯದಲ್ಲಿ ಹಿಂದಿನ ಅವಧಿಯಲ್ಲಿ ಹೇಳಿಕೊಟ್ಟಿದ್ದ ಪದ್ಯ ಭಾಗವನ್ನು ಒಟ್ಟಾಗಿ ಹಾಡಲು ತಿಳಿಸುವರು. |
| | 40 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆಯನ್ನು ಮಾಡಿಸುವರು. | | | ಪಠ್ಯ ಪುಸ್ತಕದಲ್ಲಿನ ಕವನ | ಶಿಕ್ಷಕ | ಪದ್ಯದ ಎರಡು ಚರಣಗಳನ್ನು ಮೊದಲು ಗುಂಪಿನಲ್ಲಿ ಹಾಡಿಸುವರು ನಂತರ ಪ್ರತಿ ವಿದ್ಯಾರ್ಥಿಯಿಂದ ಹಾಡಿಸುವರು.<br>* ಪದ್ಯದ ಕೊನೆಯ ಚರಣವನ್ನು ಮೊದಲು ಬಿಡಿ ಬಿಡಿಯಾಗಿ ಹೇಳಿಕೊಟ್ಟು ಹೇಳಿಸುವರು. ನಂತರ ಒಟ್ಟಾಗಿ ಪ್ರತಿ ಸಾಲನ್ನು ಹೇಳಿಸುವರು.<br>* ಇಡೀ ಪದ್ಯವನ್ನು ರಾಗ ಬದ್ದವಾಗಿ ಹೇಳಿಕೊಡುವರು ಮಕ್ಕಳು ಹಾಡುವರು.<br>* ಒಮ್ಮೆ ಪೂರ್ಣ ಪದ್ಯವನ್ನು ಎಲ್ಲಾ ಮಕ್ಕಳಿಂದ ರಾಗಬದ್ಧವಾಗಿ ಹಾಡಿಸುವರು. |
| | 25 ನಿ | | | | ಶಿಕ್ಷಕ | **ಅಭ್ಯಾಸ ಹಂತ :**<br>ಮಕ್ಕಳಿಂದ ಪದ್ಯವನ್ನು ಒಟ್ಟಾಗಿ ಹೇಳಿಸುವರು.<br>* ಶಿಕ್ಷಕರು ಒಂದು ಸಾಲನ್ನು ಹೇಳಿ ನಂತರ ಮಕ್ಕಳು ಮುಂದಿನ ಸಾಲನ್ನು ಹೇಳುವಂತೆ ತಿಳಿಸುವರು.<br>ಈ ಚಟುವಟಿಕೆಯುನ್ನು ಎಲ್ಲಾ ಮಕ್ಕಳಿಂದ | | | ಪಠ್ಯ ಪುಸ್ತಕ | ಸ್ವಕಲಿಕೆ | ಮಕ್ಕಳು ಗುಂಪಿನಲ್ಲಿ ಪದ್ಯಗಳನ್ನು ಹಾಡಿಕೊಳ್ಳುವರು. |
| | 05 ನಿ | | | | ಶಿಕ್ಷಕ | ಪುನರಾವರ್ತಿಸುವರು.<br>ಎರಡೂ ತರಗತಿಗಳ ಪದ್ಯಗಳನ್ನು ಒಟ್ಟಾಗಿ ಎರಡೂ ತರಗತಿಯ ಮಕ್ಕಳಿಂದ ಹೇಳಿಸುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2 (M-23) | 20 ನಿ | ಗಣಿತ “ಕ್ರಮ ವಾಚಕಗಳು” | * 1 ರಿಂದ 9ರ ವರೆಗಿನ ಸಂಖ್ಯೆಗಳನ್ನು ಬಳಸಿ ಕ್ರಮ ವಾಚಕಗಳನ್ನು ಗುರುತಿಸುವುದು ಮತ್ತು ಬರೆಯುವುದು | ತರಗತಿಯಲ್ಲಿ ಲಭ್ಯ ವಸ್ತುಗಳು | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** ಶಿಕ್ಷಕರು ಈ ಹಿಂದೆ 2ನೇ ತರಗತಿಗೆ ಆಡಿಸಿದಂತೆ ‘ಸ್ಮರಣೆ’ ಆಟ (Memory Game) ಆಡಿಸುವರು. (ಗರಿಷ್ಠ 9 ವಸ್ತುಗಳು) | ಗಣಿತ “ಸಂಕಲನ” | * ಮೊತ್ತವು 99ಕ್ಕೆ ಮೀರದಂತೆ 2 ಅಂಕಿಗಳುಳ್ಳ ಎರಡು ಅಥವಾ ಮೂರು ಸಂಖ್ಯೆಗಳನ್ನು ದಶಕವಿಲ್ಲದ ರೀತಿಯಲ್ಲಿ ಸಂಕಲನ ಮಾಡುವುದು. | ಸ್ಥಾನ ಬೆಲೆ ಮಿಂಚುಪಟ್ಟಿ | ಶಿಕ್ಷಕ | ಮಕ್ಕಳು 1ನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ತೊಡಗುವರು. |
| | 20 ನಿ | | | ಪೆನ್, ಪೆನ್ಸಿಲ್, ಡಸ್ಟರ್, ಚಾಕು, ಸ್ಕೇಲ್......... | ಶಿಕ್ಷಕ | **ಕಲಿಕಾಂಶ ಚಟುವಟಿಕೆ :** ಮತ್ತೊಮ್ಮೆ ಅದೇ ವಸ್ತುಗಳನ್ನು ಟೇಬಲ್ಲಿನ ಮೇಲಿಟ್ಟು ಅವುಗಳು ಎಷ್ಟನೇಯ ವಸ್ತು ಎಂಬುದನ್ನು ಪ್ರತಿ ವಿದ್ಯಾರ್ಥಿಯಿಂದ ಹೇಳಿಸುವರು. [ವಿವಿಧ ವಸ್ತುಗಳನ್ನು ಬಳಸಬಹುದು]. | | | | ಶಿಕ್ಷಕ | ಶಿಕ್ಷಕರು ಹಿಂದಿನ ತರಗತಿಗಳಲ್ಲಿ ತಯಾರಿಸಿದ ಸ್ಥಾನಬೆಲೆ ಮಿಂಚುಪಟ್ಟಿ ಬಳಸಿ, ಸಂಖ್ಯೆಗಳನ್ನು ವಿಸ್ತರಿಸಿ ಹೇಳುವ ಮತ್ತು ಬರೆಯುವುದನ್ನು ಪುನರಾವರ್ತನೆ ಮಾಡುವಂತೆ ಸೂಚಿಸಿ ನೀಡುವರು. |
| | | | | | | | | | | ಹಿರೇಮಣಿ | ಮಕ್ಕಳು ಮಿಂಚುಪಟ್ಟಿ ಬಳಸಿ ಮೇಲಿನ ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | ಹೂವು, ಹಣ್ಣು, ನಾಣ್ಯಗಳು, ಪ್ರಾಣಿಗಳ ಮಾದರಿಗಳು | ಶಿಕ್ಷಕ | ಹಿರೇಮಣಿಯು ನೇತೃತ್ವದಲ್ಲಿ ಮತ್ತೊಮ್ಮೆ 4 ಗುಂಪುಗಳಾಗಿ ಮಾಡಿ. ತರಗತಿಯ 4 ಮೂಲೆಗಳಲ್ಲಿ ಹೂವುಗಳು, ಹಣ್ಣುಗಳು, ಪ್ರಾಣಿಗಳು ಮಾದರಿಗಳು, ನಾಣ್ಯಗಳು ಇತ್ಯಾದಿ ಬಳಸಿ ಮಕ್ಕಳಿಂದ ಯಾವ ವಸ್ತು ಎಷ್ಟನೆಯದು ಎಂದು ಹೇಳಿಸುವರು ಮತ್ತು ಪುಟ 50, 51ರಲ್ಲಿನ ಚಟುವಟಿಕೆಯನ್ನು ಬರೆಯುವಂತೆ ಸೂಚಿಸುವರು. | | | | ಶಿಕ್ಷಕ | ಮಕ್ಕಳ ಚಟುವಟಿಕೆ ಗಮನಿಸಿ ಸೂಕ್ತ ಸಲಹೆ ಮಾರ್ಗದರ್ಶನ ನೀಡುವರು. |
| | 30 ನಿ | | | | ಹಿರೇಮಣಿ | ಮಕ್ಕಳು ಗುಂಪು ಚಟುವಟಿಕೆಯಲ್ಲಿ ತೊಡಗುವರು. | | | ವಿಸ್ತರಿಸಿ ಸಂಕಲನದ ಲೆಕ್ಕಗಳುಳ್ಳ ಕಾರ್ಡ್‌ಗಳು ದಾಳಗಳು ಪಠ್ಯಪುಸ್ತಕ | ಶಿಕ್ಷಕ | ಶಿಕ್ಷಕರು ಪಠ್ಯಪುಸ್ತಕ, ದಾಳಗಳು ಹಾಗೂ ಇತರೇ ಮಾದರಿ ಕಾರ್ಡ್‌ಗಳನ್ನು ಬಳಸಿ ವಿಸ್ತರಿಸಿ ಸಂಕಲನ ಮಾಡುವ ವಿಧಾನವನ್ನು ವಿವರಿಸಿ, ಕಪ್ಪುಹಲಗೆಯ ಮೇಲೆ ಮಾದರಿ ಲೆಕ್ಕಗಳನ್ನು ಮಾಡಿಸಿ ಲೆಕ್ಕಗಳನ್ನು ಮಾಡಿಸುವರು. [ಪುಟ–73ರ ಲೆಕ್ಕ ಮಾಡಿಸುವುದು]. |
| | 05 ನಿ | | | | | ಮಕ್ಕಳ ಚಟುವಟಿಕೆ ಪರಿಶೀಲಿಸಿ ಸೂಕ್ತ ಸಲಹೆ ನೀಡುವರು. | | | | ಶಿಕ್ಷಕ | ಮಕ್ಕಳ ಚಟುವಟಿಕೆ – ಬರವಣಿಗೆ ಗಮನಿಸಿ, ಪರಿಶೀಲಿಸಿ, ಸೂಕ್ತ ಸಲಹೆ – ಮಾರ್ಗದರ್ಶನ ನೀಡುವರು. |

“ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು”.

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 ಮೊದಲ 40 ನಿ KAN 38 | 10 ನಿ | ಕನ್ನಡ ಸಣ್ಣೀ ಮದುವೆ | ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸಗಳು ಗೀತೆಗಳು ಮತ್ತು ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥ ಮಾಡಿಕೊಳ್ಳುವುದು. | ಪಕ್ಷಿಗಳ ಪ್ರಾಣಿಗಳ ಚಿತ್ರಗಳು | ಶಿಕ್ಷಕ | ಹಿಂದಿನ ಅವಧಿಯಲ್ಲಿನ ಅಭ್ಯಾಸ ಹಂತವನ್ನು ಮುಂದುವರೆಸುತ್ತಾ ಪದ್ಯದಲ್ಲಿ ಬಂದಿರುವ ಪಕ್ಷಿ, ಕೀಟ ಇತ್ಯಾದಿಗಳ ಹೆಸರನ್ನು ಹೇಳಿಸಲು ಹಿರೇಮಣಿಗೆ ಹೇಳುವರು. | ಕನ್ನಡ ಹಾವಿನ ಹಾಡು | ಹಾಡುಗಳು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವುದು. | ಕಪ್ಪು ಹಲಗೆ | ಶಿಕ್ಷಕ | ಹಿಂದಿನ ತರಗತಿಯಲ್ಲಿ ನೀಡಿದ ಗೃಹಪಾಠ ಪರಿಶೀಲಿಸುವರು. |
| | 25 ನಿ | | | | ಹಿರೇಮಣಿ | ಮೇಲೆ ಹೇಳಲಾದ ಚಟುವಟಿಕೆಯನ್ನು ಮುಂದುವರೆಸುವರು. | | | | ಶಿಕ್ಷಕ | * ಮಕ್ಕಳಿಗೆ ಪೂರ್ಣ ಪದ್ಯವನ್ನು ಒಮ್ಮೆ ಹಾಡಿಸುವರು.<br>* ಸರಳ ಪ್ರಶ್ನೆಗಳಿಂದ ಪದ್ಯವನ್ನು ಅರ್ಥಮಾಡಿಕೊಳ್ಳುವಂತೆ ಪ್ರಶ್ನೆಗಳಿಗೆ ಉತ್ತರ ಹೇಳಿಸುವರು.<br>* ಹೊಸ ಪದಗಳನ್ನು ಕಪ್ಪು ಹಲಗೆಯ ಮೇಲೆ ಬರೆದು ಹೇಳಿಸುವರು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆ ಪರಿಶೀಲಿಸಿ ಗುಂಪಿನಲ್ಲಿ ಹೇಳಿಸುವರು. | | | | | ಮೇಲಿನ ಪದಗಳನ್ನು ನಕಲು ಮಾಡಿಸಲು ತಿಳಿಸುವರು. |
| ನಂತರದ 40 ನಿ | 10 ನಿ | ಸಾ. ಉ. ಉ. ಕಾ “ಗ್ಲೈಡರ್ ತಯಾರಿಕೆ” | * ಸರಳ ಹಾಗೂ ಲಭ್ಯ ವಸ್ತುಗಳನ್ನು ಬಳಸಿ, ಆಟಿಕೆಗಳನ್ನು ತಯಾರಿಸುವುದನ್ನು ತಿಳಿಯುವರು. | 4 x 15 ಸೆಂ.ಮೀ ಕಾಗದದ ಪಟ್ಟಿ | ಶಿಕ್ಷಕ | ಮೊದಲು ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸಿ, ಸುಮಾರು 4 x 15 ಸೆಂ.ಮೀ. ಅಳತೆಯ ಕಾಗದವನ್ನು ವಿತರಿಸುವುದು ಹಾಗೂ ಅದನ್ನು ಮೇಲಿನಿಂದ ಮೂರನೇ ಒಂದು ಭಾಗದಷ್ಟು ಮಡಿಸಿ ಗುರುತು ಮಾಡಿಕೊಳ್ಳಲು ಹೇಳುವರು. | | | | | 1ನೇ ತರಗತಿಯ ಮಕ್ಕಳೊಂದಿಗೆ ಸೇರಿ ಚಟುವಟಿಕೆಯಲ್ಲಿ ತೊಡಗುವರು. |
| | 20 ನಿ | | | | ಶಿಕ್ಷಕ | ನಂತರ ಶಿಕ್ಷಕರು ಒಂದು ಮಾದರಿ ಗ್ಲೈಡರ್ ಮಾಡಿ ತೋರಿಸಿ, ನಂತರ ಮಕ್ಕಳಿಗೆ ಮಾಡಲು ಸೂಚಿಸುವರು.<br><br>ಚಿತ್ರ – 1 ಚಿತ್ರ – 2<br>**ವಿಧಾನ :** ಚಿತ್ರ 1ರಲ್ಲಿ ತೋರಿಸಿದಂತೆ ಗುರುತು ಮಾಡಿದ ಗೆರೆಗೆ ಸರಿಯಾಗಿ ಎರಡೂ ಬದಿಗಳಿಂದ 1 ಸೆಂ.ಮೀ. ಕತ್ತರಿಸಿ, ಕೆಳಗಿನ ಭಾಗವನ್ನು ಒಂದರ ಮೇಲೆ ಒಂದರಂತೆ ಕಾಗದ ಬರುವ ಹಾಗೆ ಮಡಿಸಿ, ಮೇಲಿನ ಭಾಗವನ್ನು ಚಿತ್ರ ಎರಡರಲ್ಲಿ ತೋರಿಸಿದಂತೆ ಕತ್ತರಿಸಿ, ಎರಡು ಭಾಗಗಳನ್ನು ವಿರುದ್ಧ ದಿಕ್ಕಿಗೆ ಮಡಿಸಿ ಮೇಲಿನಿಂದ ಕೆಳಗೆ ಬಿಟ್ಟರೆ ತಿರುಗುತ್ತಾ ಬೀಳುವುದು. | | | | | |
| | 10 ನಿ | | | | ಶಿಕ್ಷಕ | ಉತ್ತಮವಾಗಿ ಗ್ಲೈಡರ್ ತಯಾರಿಸಿದ ವಿದ್ಯಾರ್ಥಿಯನ್ನು ಗುರುತಿಸಿ ಪ್ರಶಂಸಿಸುವರು. ನಂತರ ತಮ್ಮ ಪರಿಸರದಲ್ಲಿ ಸಿಗುವ ಪಕ್ಷಿಗಳ ಗರಿಗಳನ್ನು ಸಂಗ್ರಹಿಸಿಕೊಂಡು ಬರುವಂತೆ ಸೂಚನೆ ನೀಡುವರು. | | | | | |

“ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು”.

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **4** **ಮೊದಲ** **40 ನಿ** | 15 ನಿ | **ಜೀವನ ವಿಜ್ಞಾನ** **ಸಹಜ ಉಸಿರಾಟ** | * ಮಕ್ಕಳಲ್ಲಿ ಕ್ರಮಬದ್ಧವಾಗಿ ಉಸಿರಾಟ ಕ್ರಿಯೆಯನ್ನು ಅಭ್ಯಾಸ ಮಾಡಿಸುವುದು. | ಶಾಂತಿಮಂತ್ರ ಪ್ರಾರ್ಥನಾ ಗೀತೆಗಳು | | ಸೂಕ್ತ ಅಂತರದಲ್ಲಿ ಮಕ್ಕಳನ್ನು ಕೂರಿಸುವರು. ಮಕ್ಕಳಿಗೆ ಬೆನ್ನು ನೇರವಾಗಿ, ಕೈಯನ್ನು ಮಂಡಿಯ ಮೇಲೆ ಇಟ್ಟು ಕೂರುವಂತೆ, ಸೂಕ್ತ ಆದೇಶಗಳನ್ನು ನೀಡುವರು. [ಚಿನ್ಮುದ್ರೆಯಲ್ಲಿ ಕೂರಿಸಿ ಸಹಜ ಉಸಿರಾಟವನ್ನು ಮಾಡಿಸುವುದು. ಮೊದಲಿಗೆ ಶಿಕ್ಷಕರು, ಮಾದರಿಯಾಗಿ ಮಾಡಿ ತೋರಿಸಬೇಕು). | | | | | 2ನೇ ತರಗತಿ ಮಕ್ಕಳು 1ನೇ ತರಗತಿ ಮಕ್ಕಳೊಡನೆ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 20 ನಿ | | | | | * ಮಕ್ಕಳಿಗೆ ಶಾಂತಿ ಮಂತ್ರವನ್ನು ಹೇಳಿಕೊಟ್ಟು ಅವರಿಂದ ಹೇಳಿಸುವರು, * ಸರ್ವಧರ್ಮ ಪ್ರಾರ್ಥನೆಯನ್ನು ಅಭ್ಯಾಸ ಮಾಡಿಸುವರು. | | | | | |
| | 05 ನಿ | | | | | ಕೊನೆಯಲ್ಲಿ ಶಿಕ್ಷಕರು, ಮಕ್ಕಳಿಂದ ವಿವಿಧ ರೀತಿಯ ಚಪ್ಪಾಳೆಗಳನ್ನು ಹಾಕಿಸುವರು. | | | | | |
| **4** **ಕೊನೆಯ** **40 ನಿ** | 10 ನಿ | **ಮೌಲ್ಯ ಶಿಕ್ಷಣ** **ಪ್ರಾಮಾಣಿಕತೆ** | ಪ್ರಾಮಾಣಿಕತೆಯ ಮಹತ್ವವನ್ನು ಅರಿಯುವರು | ಕಥೆಯ ಸನ್ನಿವೇಶಗಳ ತೋರಿಸುವಂತಹ ಚಿತ್ರಪಟಗಳು | ಶಿಕ್ಷಕ | ಮೊದಲಿಗೆ ಶಿಕ್ಷಕರು, ಮಕ್ಕಳನ್ನು ತರಗತಿಯಲ್ಲಿ ವ್ಯವಸ್ಥಿತವಾಗಿ ಕೂರಿಸಿಕೊಂಡು ಕೆಲವು ಸನ್ನಿವೇಶಗಳಲ್ಲಿ ನೀವು ಹೇಗೆ ಪ್ರತಿಕ್ರಿಯಿಸುವಿರಿ ಎಂದು ಪ್ರಶ್ನಿಸುವರು. **ಸನ್ನಿವೇಶ :** * ಆಟದ ಮೈದಾನದಲ್ಲೊಂದು ಪೆನ್ಸಿಲ್ ಸಿಕ್ಕಾಗ, * ತಮ್ಮ ಮುಂದೆ ಹೋಗುತ್ತಿರುವವರು ತಮ್ಮ ವಸ್ತುಗಳನ್ನು ಬೀಳಿಸಿಕೊಂಡು ಮುಂದೆ ಹೋದಾಗ. | | | | | "ಎರಡೂ ತರಗತಿಯ ಮಕ್ಕಳು ಒಟ್ಟುಗೂಡಿ ಚಟುವಟಿಕೆಯಲ್ಲಿ ತೊಡಗುವರು" |
| | 20 ನಿ | | | | ಶಿಕ್ಷಕ | ನಂತರ ಶಿಕ್ಷಕರು ಪ್ರಾಮಾಣಿಕತೆಗೆ ಸಂಬಂಧಿಸಿದಂತೆ 3 ಕೊಡಲಿಗಳ ಕಥೆ [3ನೇ ತರಗತಿ ಕನ್ನಡ ಮಸ್ತಕ ನೋಡುವುದು] ಭಾವಪೂರ್ವಕವಾಗಿ ಹೇಳುವರು. ನಂತರ ಶಿಕ್ಷಕರು, ಕಥೆಯ ನೀತಿಯನ್ನು ಮಕ್ಕಳಿಂದ ಹೇಳಿಸುವರು. ಅವಶ್ಯಕವಿದ್ದಲ್ಲಿ, ತಾವೂ ಸಹ ನೀತಿ ಹೇಳಿ ವಿವರಣೆ ನೀಡುವರು. | | | | | |
| | 10 ನಿ | | | | ಶಿಕ್ಷಕ | ಕೊನೆಯಲ್ಲಿ ಮಕ್ಕಳಿಂದ ಇದೇ ಕಥೆ ಅಥವಾ ಪ್ರಾಮಾಣಿಕತೆಗೆ ಸಂಬಂಧಿಸಿದಂತೆ ತಮ್ಮದೇ ಮಾತುಗಳಲ್ಲಿ ಹೇಳುವಂತೆ ಸೂಚಿಸಿ, ಅಗತ್ಯ ಮಾರ್ಗದರ್ಶನ ನೀಡುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 KAN 39 | 10 ನಿ | ಕನ್ನಡ "ಸಣ್ಣಿ ಮದುವೆ" | ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸಗಳು, ಗೀತೆಗಳು ಮತ್ತು ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು | ಪಠ್ಯದಲ್ಲಿನ ಕವನ | ಶಿಕ್ಷಕರು | ಹಿಂದಿನ ತರಗತಿಯಲ್ಲಿ ಅಭ್ಯಾಸ ಮಾಡಿಸಿದ್ದ ಸಣ್ಣೀ ಮದುವೆ ಪಠ್ಯವನ್ನು ಸಾಮೂಹಿಕವಾಗಿ ಹಾಡಿಸುವರು. | ಕನ್ನಡ ಹಾವಿನ ಹಾಡುಗಳು | ಹಾಡುಗಳು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವುದು | ಪಠ್ಯಪುಸ್ತಕ | ಶಿಕ್ಷಕರು | ಗುಂಪಿನಲ್ಲಿ 'ಹಾವಿನ ಹಾಡು' ಪದ್ಯವನ್ನು ಹಾಡಿಕೊಳ್ಳಲು ತಿಳಿಸುವರು. |
| | 30 ನಿ | | | ಪ್ರಾಸ ಪದಗಳ ಮಿಂಚುಪಟ್ಟಿ ಪಠ್ಯ ಪುಸ್ತಕ | | **ಮೌಲ್ಯಮಾಪನ ಹಂತ :** ಪಠ್ಯಪುಸ್ತಕದ ಪುಟ 13 ಭಾಷಾ ಚಟುವಟಿಕೆಯನ್ನು ಹೇಳಿಕೊಟ್ಟು ಹೇಳಿಸುವರು.<br>* ಕೊಟ್ಟಿರುವ ಪ್ರಾಸ ಪದಗಳನ್ನು ಹೇಳಿಸುವರು.<br>* ಪದ್ಯದಲ್ಲಿ ಬಿಟ್ಟಿರುವ ಮುಂದಿನ ಸಾಲನ್ನು ಹೇಳಿಸುವರು.<br>* ಒಂದು ಪ್ರಾಸ ಪದವನ್ನು ಹೇಳಿ ಅದಕ್ಕೆ ಸಂಬಂಧಿಸಿದ ಮತ್ತೊಂದು ಪ್ರಾಸ ಪದವನ್ನು ಮಕ್ಕಳಿಂದ ಹೇಳಿಸುವರು. | | | | ಹಿರೇಮಣಿ | ಮಕ್ಕಳು ಗುಂಪಿನಲ್ಲಿ ಪದ್ಯವನ್ನು ಹಾಡಿಕೊಳ್ಳುವರು. |
| | 40 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆಯನ್ನು ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪರಿಹಾರ ಬೋಧನೆಯನ್ನು ಹಿರೇಮಣಿಯ ಮೂಲಕ ಕೈಗೊಳ್ಳುವುದು ನಂತರ ಶಿಕ್ಷಕ ಪರಿಶೀಲಿಸಿ ಮಾರ್ಗದರ್ಶನ ನೀಡುವರು. | | | ಪಠ್ಯಪುಸ್ತಕ | ಶಿಕ್ಷಕ | **ಅಭ್ಯಾಸ ಚಟುವಟಿಕೆ :**<br>* ಪ್ರತಿ ಮಗುವಿನಿಂದ ಪೂರ್ಣ ಪದ್ಯವನ್ನು ಹಾಡಿಸುವರು.<br>* ಪಠ್ಯಪುಸ್ತಕ ಪುಟ –27 'ಆ' ಚಟುವಟಿಕೆಯನ್ನು ಮಾಡಿಸುವರು.<br>* 1ನೇ ತರಗತಿಯ ಮಕ್ಕನ್ನು ಸೇರಿಸಿಕೊಂಡು ಪಠ್ಯಪುಸ್ತಕದ ಪುಟ–29ರ 'ಬಾಬಾ ಗಿಳಿಯೇ' ಹಾಡನ್ನು ರಾಗವಾಗಿ ಅಭಿನಯಪೂರ್ವಕವಾಗಿ ಹಾಡಿಸುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಕಲಿಕಾ ಸಾಮಗ್ರಿ ಹಾಗೂ ಉಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಕಲಿಕಾ ಸಾಮಗ್ರಿ ಹಾಗೂ ಉಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2 (M-24) | 10 ನಿ | ಗಣಿತ ಕ್ರಮಾಚಕಗಳು | * 1 ರಿಂದ 9೮ ವರೆಗಿನ ಸಂಖ್ಯೆಗಳನ್ನು ಬಳಸಿ ಕ್ರಮಾಚಕಗಳನ್ನು ಗುರುತಿಸುವುದು ಮತ್ತು ಬರೆಯುವುದು | ನಾಣ್ಯಗಳು, ಹಣ್ಣುಗಳು, ಹೂವುಗಳು, ಕಪ್ಪು ಹಲಗೆ, ಹಾಗೂ ಚಿತ್ರಗಳು | ಶಿಕ್ಷಕ | **ಅಭ್ಯಾಸ ಮತ್ತು ಬಳಕೆಯ ಚಟುವಟಿಕೆ / ಪುನರ್ಬಲನ ಚಟುವಟಿಕೆ :** ಹಿರೇಮಣಿಯ ನೇತೃತ್ವದಲ್ಲಿ ಮಕ್ಕಳನ್ನು ತರಗತಿಯ ಮುಂಭಾಗಕ್ಕೆ ಕರೆದು ಟೇಬಲ್ ಮೇಲಿರುವ ವಸ್ತು ಅಥವಾ ಕಪ್ಪು ಹಲಗೆಯ ಮೇಲಿರುವ ಚಿತ್ರಗಳನ್ನು ನೋಡಿ ಎಷ್ಟನೆಯ ವಸ್ತು ಎಂಬುದನ್ನು ಗಟ್ಟಿಯಾಗಿ ಹೇಳಿಸುವರು. ಈ ಚಟುವಟಿಕೆ ಮಾಡಿಸಲು ಸೂಚನೆ ನೀಡುವರು. | ಗಣಿತ "ಸಂಕಲನ" | * ಮೊತ್ತವು 99ಕ್ಕೆ ಮೀರದಂತೆ 2 ಅಂಕಿಗಳುಳ್ಳ ಎರಡು ಅಥವಾ ಮೂರು ಸಂಖ್ಯೆಗಳನ್ನು ದಶಕವಿಲ್ಲದ ರೀತಿಯಲ್ಲಿ ಸಂಕಲನ ಮಾಡುವುದು. | ಪಠ್ಯ ಪುಸ್ತಕ 3 ಸಂಖ್ಯೆಯ ಸಂಕಲನದ ಲೆಕ್ಕವುಳ್ಳ ಕಾರ್ಡ್/ದಾಳ ಇತ್ಯಾದಿ | ಶಿಕ್ಷಕ | ಶಿಕ್ಷಕರು ಮೂರು ಸಂಖ್ಯೆಗಳ ಸಂಕಲನದ 3 ಲೆಕ್ಕಗಳನ್ನು ಕಪ್ಪು ಹಲಗೆಯ ಮೇಲೆ ಬರೆದು ಅದನ್ನು ಸಂಕಲನ ಮಾಡಲು ಪ್ರಯತ್ನಿಸುವಂತೆ ಎಲ್ಲಾ ವಿದ್ಯಾರ್ಥಿಗಳಿಗೆ ಸೂಚನೆ ನೀಡುವರು. |
| | 20 ನಿ | | | | ಹಿರೇಮಣಿ | ಹಿರೇಮಣಿಯ ನೇತೃತ್ವದಲ್ಲಿ ಮಕ್ಕಳು ಕ್ರಮಾನುಗತ ಸಂಖ್ಯೆಗಳ ಚಟುವಟಿಕೆ ಮಾಡುವರು. | | | | ಶಿಕ್ಷಕ | ಶಿಕ್ಷಕರು ಮಕ್ಕಳು ಮಾಡಿದ ಲೆಕ್ಕಗಳನ್ನು ನೋಡಿ ಮತ್ತೊಮ್ಮೆ 3 ಸಂಖ್ಯೆಗಳ ಸಂಕಲನದ ಕೆಲವು ಮಾದರಿ ಲೆಕ್ಕಗಳನ್ನು ಮಾಡಿ ತೋರಿಸಿ ನಂತರ ಪುಟ – 75ರಲ್ಲಿನ ಲೆಕ್ಕಗಳನ್ನು ಮಾಡಲು ಹೇಳುವರು. |
| | 40 ನಿ | | | | ಶಿಕ್ಷಕ | **ಮೌಲ್ಯಮಾಪನ ಚಟುವಟಿಕೆ :** (ಎರಡೂ ತರಗತಿಯ ಮಕ್ಕಳಿಗೆ ಮೌಲ್ಯಮಾಪನ ಹಂತದ ಚಟುವಟಿಕೆಗಳಿರುವುದರಿಂದ ಎರಡೂ ತರಗತಿಯನ್ನು ಶಿಕ್ಷಕರೇ ನಿರ್ವಹಿಸಬಹುದಾಗಿದೆ). ಪುಟ–51, 52ರಲ್ಲಿನ ಚಟುವಟಿಕೆಯನ್ನು ಸ್ವತಂತ್ರವಾಗಿ ಮಾಡುವಂತೆ ಸೂಚನೆ ನೀಡುವರು. ಮಕ್ಕಳ ಚಟುವಟಿಕೆ ಗಮನಿಸುವರು. ಮೌಲ್ಯಮಾಪನ ಮಾಡುವರು. | | | | ಶಿಕ್ಷಕ | ನಂತರ ಶಿಕ್ಷಕರು ಪುಟ–75ರ ಚಟುವಟಿಕೆಯನ್ನು ಬಳಸಿ ಮೌಲ್ಯಮಾಪನ ಮಾಡುವರು, ಈ ಚಟುವಟಿಕೆಗಳನ್ನು ಮಾಡುವಂತೆ ಮಕ್ಕಳಿಗೆ ಹೇಳುವರು. ಮಕ್ಕಳ ಚಟುವಟಿಕೆ ಗಮನಿಸುತ್ತ ಮೌಲ್ಯಮಾಪನ ಮಾಡುವರು. |
| | 10 ನಿ | | | | ಶಿಕ್ಷಕ | ಮಕ್ಕಳ ಚಟುವಟಿಕೆ (ಬರವಣಿಗೆ)ಯನ್ನು ಪರಿಶೀಲಿಸುವರು. | | | | ಶಿಕ್ಷಕ | ಮಕ್ಕಳ ಬರವಣಿಗೆಯನ್ನು ಮೌಲ್ಯಮಾಪನ ಮಾಡುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 | 15 ನಿ | **ಸಾ. ಉ. ಉ. ಕಾರ್ಯ**<br>**ಪಕ್ಷಿಗಳ ಗರಿಗಳ ಸಂರಕ್ಷಣೆ** | ಮಕ್ಕಳಲ್ಲಿ ಸ್ಥಳೀಯವಾಗಿ ದೊರೆಯುವ ಪಕ್ಷಿಗಳ ಗರಿಗಳು ಮತ್ತು ಅವುಗಳ ಸಂರಕ್ಷಣೆಯ ಕೌಶಲ ಬೆಳೆಸುವುದು | ಅಭಿನಯ ಗೀತೆ | ಶಿಕ್ಷಕ | ಶಿಕ್ಷಕರು ಎರಡೂ ತರಗತಿಗಳ ಮಕ್ಕಳನ್ನು ಒಟ್ಟಿಗೆ ಸಾಮೂಹಿಕವಾಗಿ ಕೂರಿಸಿಕೊಂಡು ಗೀಜಗ........ಗೀಜಗ...... ಎಂಬ ಅಭಿನಯಗೀತೆ ಹೇಳಿಕೊಟ್ಟು ರಾಗವಾಗಿ ಹಾಡಿಸುವರು. | | | | | ಎರಡನೇ ತರಗತಿಯ ಮಕ್ಕಳೂ ಸಹ Iನೇ ತರಗತಿಯಲ್ಲಿ ಸೂಚಿಸಿರುವಂತೆ ಚಟುವಟಿಕೆಯಲ್ಲಿ ಭಾಗವಹಿಸಿ ಸಾಮರ್ಥ್ಯಗಳಿಸುವರು. |
| | 30 ನಿ | | | ವಿವಿಧ ಪಕ್ಷಿಗಳ ಗರಿಗಳು | ಶಿಕ್ಷಕ | * ಶಿಕ್ಷಕರು ಹಿಂದಿನ ಅವಧಿಯಲ್ಲಿ ತಿಳಿಸಿರುವಂತೆ ಮಕ್ಕಳು ಸಂಗ್ರಹಿಸಿ ತಂದಿರುವ ಗರಿಗಳನ್ನು ಎಲ್ಲಾ ಮಕ್ಕಳಿಂದ ಸಂಗ್ರಹಿಸಿ ಮೊದಲು ವಿವಿಧ ಪಕ್ಷಿಗಳ ಗರಿಗಳನ್ನು ವರ್ಗೀಕರಿಸುವಂತೆ ತಿಳಿಸುವರು.<br>* ನಂತರ ಮಕ್ಕಳಿಗೆ ¼ ಅಳತೆಯ ಡ್ರಾಯಿಂಗ್ ಶೀಟ್‌ನ್ನು ನೀಡುವುದಕ್ಕೆ ಮುಂಚೆ ಅಗತ್ಯಕ್ಕೆ ತಕ್ಕಂತೆ ಮಕ್ಕಳ ಗುಂಪು ರಚಿಸುವರು.<br>* ನಂತರ ಡ್ರಾಯಿಂಗ್ ಶೀಟ್‌ಗಳನ್ನು ತಂಡಕ್ಕೆ ಒಂದರಂತೆ ನೀಡುವರು. | | | | | |
| | 25 ನಿ | | | ಡ್ರಾಯಿಂಗ್ ಶೀಟ್ ಗೋಂದು ಗರಿಗಳು | ಗುಂಪು ಚಟುವಟಿಕೆ (ಶಿಕ್ಷಕ) | ಮಕ್ಕಳು ತಾವು ವರ್ಗೀಕರಿಸಿರುವ ಪಕ್ಷಿಗಳ ಗರಿಗಳನ್ನು ಡ್ರಾಯಿಂಗ್ ಶೀಟ್‌ನಲ್ಲಿ ಗೋಂದಿನ ಸಹಾಯದಿಂದ ಅಂಟಿಸುವರು. ಶಿಕ್ಷಕರು ಅಗತ್ಯ ಮಾರ್ಗದರ್ಶನ ನೀಡುವರು. | | | | | |
| | 10 ನಿ | | | | ಶಿಕ್ಷಕ | ನಂತರ ಅಂಟಿಸಿರುವ ಗರಿಗಳನ್ನು ಬಾರ್ಡರ್ ಹಾಕಿ ಹೆಸರು ಬರೆದು ತರಗತಿಯಲ್ಲಿ ಪ್ರದರ್ಶಿಸಲು ಅನುಕೂಲವಾಗುವಂತೆ ಸಂರಕ್ಷಿಸಿಡುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4<br>EVS-24 | | ಪರಿಸರ ಅಧ್ಯಯನ<br>ನಮ್ಮ ದೇಹ | ದೇಹದ ಭಾಗಗಳನ್ನು ಗುರುತಿಸವುದು | | | **ಸೂಚನೆ : ಎರಡೂ ತರಗತಿಗಳಿಗೂ ಅಭ್ಯಾಸ ಚಟುವಟಿಕೆ** | ಪರಿಸರ ಅಧ್ಯಯನ<br>ನಮ್ಮ ದೇಹದ ಭಾಗಗಳು | ನಮ್ಮ ದೇಹದ ಭಾಗಗಳನ್ನು ಗುರುತಿಸಿರುವ ಮತ್ತು ಅವುಗಳ ಕೆಲಸಗಳನ್ನು ತಿಳಿಯುವರು | | | |
| | 10 ನಿ | | | ಪಠ್ಯ ಪುಸ್ತಕ | ಶಿಕ್ಷಕ | ಪಠ್ಯಪುಸ್ತಕ ಪುಟ 23ರ ಚಟುವಟಿಕೆಗಳನ್ನು ಪೂರ್ಣಗೊಳಿಸಲು ಅಗತ್ಯ ಮಾರ್ಗದರ್ಶನ ಹಾಗು ಸೂಚನೆಗಳನ್ನು ನೀಡುವರು. | | | ಪಠ್ಯ ಪುಸ್ತಕ | ಶಿಕ್ಷಕ | 2ನೇ ತರಗತಿಯ ಮಕ್ಕಳು ಪಠ್ಯಪುಸ್ತಕ ಪುಟ 27ನ್ನು ತೆರೆಯಲು ಸೂಚಿಸಿ ಓದಿಸಲು ಸಿದ್ಧತೆ ಮಾಡಿಕೊಳ್ಳುವರು. |
| | 30 ನಿ | | | | ಸ್ವಕಲಿಕೆ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. | | | | ಹಿರೇಮಣಿ | ಪ್ರತಿ ಮಗುವಿನಿಂದ ಪಾಠ ಓದಿಸುತ್ತಾ ಅವರ ತಪ್ಪುಗಳನ್ನು ತಿದ್ದುತ್ತ (ಆಧ್ಯತೆ ಮೇರೆಗೆ) ಎಲ್ಲ ಮಕ್ಕಳಿಂದ ಓದಿಸುವರು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆ ಪರಿಶೀಲಿಸುವರು. | | | | ಹಿರೇಮಣಿ (ಸ್ವಕಲಿಕೆ) | ಹಿರೇಮಣಿಯ ನೇತೃತ್ವದಲ್ಲಿ ಮಕ್ಕಳು ತಾವೇ ಸ್ವತಃ ಪಾಠ ಓದಿಕೊಳ್ಳಲು ತಿಳಿಸುವರು. |
| | 30 ನಿ | | | ಪಠ್ಯ ಪುಸ್ತಕ | ಶಿಕ್ಷಕ | ಮೇಲಿನ ಚಟುವಟಿಕೆ ಮುಂದುವರೆಸಿ ಪಠ್ಯಪುಸ್ತಕ ಪುಟ '25' ಮತ್ತು 26ರ ಅಭ್ಯಾಸ ಚಟುವಟಿಕೆಯನ್ನು ವೈಯಕ್ತಿಕ ಮಾರ್ಗದರ್ಶನದೊಂದಿಗೆ ಪೂರ್ಣಗೊಳಿಸುವರು. | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆ ಪರಿಶೀಲಿಸಿ ಮಕ್ಕಳಿಗೆ ಅಗತ್ಯ ಮಾರ್ಗದರ್ಶನ ನೀಡಿ ಮುಂದಿನ ಅವಧಿಗೆ ಸಿದ್ಧತೆ ಮಾಡಿಕೊಳ್ಳುವರು. | | | | ಶಿಕ್ಷಕ | ಮಕ್ಕಳು ಪೂರೈಸಿದ ಚಟುವಟಿಕೆಯನ್ನು ಪರಿಶೀಲಿಸುವರು. ಅಗತ್ಯ ಮಾರ್ಗದರ್ಶನ ಮಾಡುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | 40 ನಿ | ಜೀವನ ವಿಜ್ಞಾನ ದೈಹಿಕ ಶಿಕ್ಷಣ | | | | ಎರಡೂ ತರಗತಿಯ ಮಕ್ಕಳನ್ನು ಸೇರಿಸಿ ಶಿಕ್ಷಕರು ಸಾಮೂಹಿಕ ಕವಾಯತನ್ನು ಮಾಡಿಸುವರು. | | | | | |
| 2 KAN-40 | 15 ನಿ | ಕನ್ನಡ<br>ಪದ ಓದು – ಅಕ್ಷರ ಕಲಿ ಹಂತ – 2 | * ವರ್ಣಮಾಲೆಯ ಸರಳ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರ್ತಿಸುವುದು.<br>ಅಚ್ಚಾದ ದಪ್ಪ ಅಕ್ಷರಗಳನ್ನು ಓದುವುದು | ಅಭಿನಯ ಗೀತೆ | ಶಿಕ್ಷಕರು | **ಪೂರ್ವಸಿದ್ಧತಾ ಚಟುವಟಿಕೆ :**<br>ಮಕ್ಕಳಿಗೆ ಹಿಂದಿನ ಅವಧಿಯಲ್ಲಿ ಹೇಳಿ ಕೊಟ್ಟ "ಬಾ ಬಾ ಗಿಳಿಯೇ" ಪದ್ಯವನ್ನು ಅಭಿನಯ ಪೂರ್ವಕವಾಗಿ ಹೇಳಿಸುವರು. | ಕನ್ನಡ<br>ಹಾವಿನ ಹಾಡು | ಹಾಡುಗಳು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವುದು. | | ಶಿಕ್ಷಕ | ಮಕ್ಕಳು ಒಂದನೇ ತರಗತಿಯಲ್ಲಿನ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 40 ನಿ | | | ಮಿಂಚುಪಟ್ಟಿಗಳು ಕಪ್ಪು ಹಲಗೆ | ಶಿಕ್ಷಕ | * ಪಠ್ಯ ಪುಸ್ತಕದ ಪುಟ –31ರ ಅಕ್ಷರ ಪದಗಳನ್ನು ಹೇಳಿಕೊಟ್ಟು ಹೇಳಿಸುವರು.<br>* ಜ.ವ.ಬ.ವು.ನ ಅಕ್ಷರಗಳ ಮಿಂಚುಪಟ್ಟಿ (ದೊಡ್ಡಗಾತ್ರ)ಗಳನ್ನು ತೋರಿಸಿ ಪ್ರತಿ ಅಕ್ಷರವನ್ನು ಹೇಳಿಕೊಟ್ಟು ಹೇಳಿಸುವರು.<br>* ಪ್ರತಿ ಅಕ್ಷರವನ್ನು ಮಗು ಗುರುತಿಸಿ ಹೇಳುವಂತೆ ಅಭ್ಯಾಸ ಮಾಡಿಸುವರು.<br>* ಜ ಮತ್ತು ವ ಅಕ್ಷರಗಳನ್ನು ಬರೆಯುವ ಕ್ರಮವನ್ನು ಹೇಳಿಕೊಟ್ಟು ಅದೇ ಕ್ರಮದಲ್ಲಿ ಮಕ್ಕಳಿಂದ ಬರೆಸುವರು. | | | ಪಠ್ಯ ಪುಸ್ತಕ | ಸ್ವಕಲಿಕೆ | ಪದ್ಯದಲ್ಲಿನ "ಬ" ಮತ್ತು "ಹ" ಗುಣಿತಾಕ್ಷರದಿಂದ ಆರಂಭವಾಗುವ ಪದಗಳನ್ನು ಆರಿಸಿ ಬರೆದು ಓದಿಕೊಳ್ಳಲು ತಿಳಿಸುವರು (ಪಠ್ಯ ಪುಸ್ತಕ ಪುಟ 27ರ ಚಟುವಟಿಕೆ) |
| | 20 ನಿ | | | ವಾಲ್‌ಸ್ಲೇಟ್ | ಸ್ವಕಲಿಕೆ | ಎಲ್ಲಾ ಮಕ್ಕಳು 'ಜ' ಮತ್ತು 'ವ' ಅಕ್ಷರಗಳನ್ನು ವಾಲ್‌ಸ್ಲೇಟಿನಲ್ಲಿ ನಕಲು ಮಾಡುವರು. | | | ಕಪ್ಪು ಹಲಗೆ ಪದಗಳ ಪಟ್ಟಿ | ಶಿಕ್ಷಕ | * ಮೇಲಿನ ಚಟುವಟಿಕೆ ಪರಿಶೀಲಿಸುವರು.<br>* ಪ್ರತಿ ಮಗುವಿನಿಂದ ಸರದಿಯಂತೆ ಒಂದೊಂದು ಪದವನ್ನು ಹೇಳಿಸುತ್ತಾ ಮಕ್ಕಳು ಬರೆದಿರುವ ಎಲ್ಲಾ ಪದಗಳನ್ನು ಕಪ್ಪುಹಲಗೆಯ ಮೇಲೆ ಬರೆದು ಓದಿಸುವರು. |
| | 05 ನಿ | | | | ಶಿಕ್ಷಕ | ಮಕ್ಕಳು ಬರೆದಿರುವ ಅಕ್ಷರಗಳನ್ನು ಪರಿಶೀಲಿಸಿ ಮಾರ್ಗದರ್ಶನ ನೀಡುವರು. | | | | ಶಿಕ್ಷಕ | ಕಪ್ಪು ಹಲಗೆಯ ಮೇಲೆ ಬರೆದ ಎಲ್ಲಾ ಪದಗಳನ್ನು ಬರೆದುಕೊಂಡು ಐದು ಭಾರಿ ನಕಲು ಮಾಡಿಕೊಂಡು ಬರಲು ತಿಳಿಸುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 | 20 ನಿ | ಸಾ.ಉ.ಉ. ಕಾರ್ಯ<br>"ಪಕ್ಷಿಗಳ ಗರಿಗಳ ಸಂರಕ್ಷಣೆ" | * ಮಕ್ಕಳಲ್ಲಿ ಪಕ್ಷಿಗಳ ಗರಿ ಸಂರಕ್ಷಣೆ ಮಾಡಿ ತರಗತಿ ಕೋಣೆಯಲ್ಲಿ ಪ್ರದರ್ಶಿಸುವ ಕೌಶಲ ಬೆಳೆಸುವುದು | ಸ್ಕೇಲ್, ಸ್ಕೆಚ್‌ಪೆನ್, ಗರಿಗಳನ್ನು ಅಂಟಿಸಿರುವ ಡ್ರಾಯಿಂಗ್ ಹಾಳೆ | ಶಿಕ್ಷಕ | ಹಿಂದಿನ ತರಗತಿಯಲ್ಲಿ ಗುಂಪು ಮಾಡಿದಂತೆಯೇ ಇಂದು ಕುಳಿತುಕೊಳ್ಳುವಂತೆ ಶಿಕ್ಷಕರು ಸೂಚನೆ ನೀಡುವರು. ನಂತರ ತಾವು ಅಂಟಿಸಿಟ್ಟಿದ್ದ ಗರಿಗಳುಳ್ಳ ಡ್ರಾಯಿಂಗ್ ಹಾಳೆಗಳನ್ನು ಗುಂಪುಗಳಿಗೆ ವಿತರಿಸಿ ಅವಶ್ಯಕ ಸಾಮಗ್ರಿಗಳನ್ನು ವಿತರಿಸುವರು. | | | | | ಒಂದನೇ ತರಗತಿಯ ಮಕ್ಕಳೊಂದಿಗೆ ಅದೇ ಚಟುವಟಿಕೆಯಲ್ಲಿ ತೊಡಗುವರು. |
| | 40 ನಿ | | | | ಶಿಕ್ಷಕ | ಎರಡನೇ ತರಗತಿಯ ಮಕ್ಕಳ ನೇತೃತ್ವದಲ್ಲಿ ಎಲ್ಲಾ ಡ್ರಾಯಿಂಗ್ ಹಾಳೆಗಳಿಗೆ ಬಾರ್ಡರ್ ಹಾಕಿ, ಈಗಾಗಲೇ ಅಂಟಿಸಿರುವ ಗರಿಗಳ ಕೆಳಗೆ ಅವುಗಳ ಹೆಸರುಗಳನ್ನು ಬರೆದು ಜೊತೆಯಲ್ಲಿಯೇ ಅವುಗಳಲ್ಲಿ ಕಾಣುವ ಬಣ್ಣಗಳ ಹೆಸರುಗಳನ್ನೂ ಬರೆಯುವಂತೆ ಸೂಚಿಸುವರು ಅಗತ್ಯ ಸಹಾಯ ಮತ್ತು ಸಹಕಾರ ನೀಡುವರು. | | | | | |
| | 20 ನಿ | | | | ಶಿಕ್ಷಕ | ನಂತರ ಶಿಕ್ಷಕರು ಪ್ರತಿ ಗುಂಪು ತಯಾರಿಸಿದ ಕಾರ್ಡ್‌ಗಳ ಮೇಲ್ಭಾಗದಲ್ಲಿ ಪಂಚ್ ಮಾಡಿ, ಟ್ಯಾಗ್ ಹಾಕಿ ತರಗತಿಯಲ್ಲಿ ಸೂಕ್ತ ಸ್ಥಳಗಳಲ್ಲಿ ನೇತು ಹಾಕುವರು. ಉತ್ತಮ ಕೆಲಸ ಹಾಗೂ ಬರವಣಿಗೆ ಮಾಡಿರುವ ವಿದ್ಯಾರ್ಥಿಯನ್ನು ಗುರುತಿಸಿ, ಪ್ರಶಂಸಿಸುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 KAN-41 | 15 ನಿ | ಕನ್ನಡ<br>ಪದ ಓದು – ಅಕ್ಷರ ಕಲಿ – ಹಂತ – 2 (ಜ,ವ,ಮ,ಬ,ನ) | * ವರ್ಣಮಾಲೆಯ ಸರಳ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರುತಿಸುವುದು.<br>ಅಚ್ಚಾದ ದಪ್ಪ ಅಕ್ಷರಗಳನ್ನು ಓದುವುದು | | ಶಿಕ್ಷಕ | ಮಕ್ಕಳು ಹಿಂದಿನ ತರಗತಿಯಲ್ಲಿ ಬರೆದು ತಂದಿರುವ ಅಭ್ಯಾಸವನ್ನು ಪರಿಶೀಲಿಸುವರು. | ಕನ್ನಡ<br>ಹಾವಿನ ಹಾಡು | ಹಾಡುಗಳು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವುದು. | ಪಠ್ಯ ಪುಸ್ತಕ | ಶಿಕ್ಷಕ | ಪಠ್ಯಪುಸ್ತಕ ಪುಟಸಂಖ್ಯೆ 28ರ ಭಾಷಾಭ್ಯಾಸ ಪದಬಂಧವನ್ನು ತುಂಬಲು ಅಗತ್ಯ ಮಾರ್ಗದರ್ಶನ ನೀಡುವರು. ಪದಬಂಧವನ್ನು ತುಂಬಲು ಹೇಳುವರು. |
| | 20 ನಿ | | | ಅಕ್ಷರಗಳ ಮಿಂಚು ಪಟ್ಟಿ | ಶಿಕ್ಷಕ | ಮಕ್ಕಳನ್ನು ಕಪ್ಪು ಹಲಗೆಯ ಹತ್ತಿರ ಕೂರಿಸಿಕೊಂಡು 'ಮ', 'ಬ', 'ನ' ಅಕ್ಷರಗಳನ್ನು ಬರೆಯುವ ಕ್ರಮವನ್ನು ಹೇಳಿಕೊಟ್ಟು ಕಲಿಸುವರು.<br>* ಮಕ್ಕಳಿಂದ ಪ್ರತಿ ಅಕ್ಷರವನ್ನು ಕಪ್ಪು ಹಲಗೆಯ ಮೇಲೆ ಬರೆಸುವರು ಮತ್ತು ಸರಿಯಾದ ಕ್ರಮವನ್ನು ಕಲಿಸುವರು.<br>* ವಾಲ್ ಸ್ಲೇಟಿನಲ್ಲಿ ಮೇಲಿನ ಅಕ್ಷರಗಳನ್ನು ಅಭ್ಯಾಸ ಮಾಡಿಸಲು ತಿಳಿಸುವರು. | | | | ಸ್ವಕಲಿಕೆ | ಶಿಕ್ಷಕರ ಮಾರ್ಗದರ್ಶನವನ್ನನುಸರಿಸಿ ಚಟುವಟಿಕೆ ಮುಂದುವರೆಸುವರು. |
| | 35 ನಿ | | | | ಸ್ವಕಲಿಕೆ | ಮೇಲಿನ ಅಭ್ಯಾಸದಲ್ಲಿ ತೊಡಗುವರು. | | | ಕಪ್ಪು ಹಲಗೆ<br>ಪಠ್ಯ ಪುಸ್ತಕ | ಶಿಕ್ಷಕ | ಮೇಲಿನ ಚಟುವಟಿಕೆ ಪರಿಶೀಲಿಸಿ ಪದಬಂಧವನ್ನು ಮತ್ತೊಮ್ಮೆ ಕಪ್ಪು ಹಲಗೆಯ ಮೇಲೆ ಮಕ್ಕಳ ಸಹಾಯದಿಂದಲೇ ತುಂಬುವರು.<br>* ಭಾಷಾ ಚಟುವಟಿಕೆ (ಪಠ್ಯ ಪುಸ್ತಕ ಪುಟ – 28ನ್ನು) ಯನ್ನು ಮಕ್ಕಳ ಸಹಾಯದಿಂದ ಮಾಡಿಸುವರು. |
| | 10 ನಿ | | | ನೋಟ್ ಪುಸ್ತಕ<br>ಅಕ್ಷರಗಳ ಮಿಂಚು ಪಟ್ಟಿ | ಶಿಕ್ಷಕ | * ಮೇಲಿನ ಚಟುವಟಿಕೆ ಪರಿಶೀಲಿಸುವರು.<br>* ಮಕ್ಕಳಿಂದ ಅಭ್ಯಾಸದ ಹಾಳೆಗಳನ್ನು ಭರ್ತಿ ಮಾಡಿಸುವರು.<br>* ಜ, ವ, ಮ, ಬ, ನ ಅಕ್ಷರಗಳನ್ನು ನೋಟ್ ಪುಸ್ತಕದಲ್ಲಿ ನಕಲು ಮಾಡಿಕೊಂಡು ಬರಲು ತಿಳಿಸುವರು. | | | ಪಠ್ಯ ಪುಸ್ತಕದ ಅಭ್ಯಾಸ | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ನೋಟ್ ಪುಸ್ತಕದಲ್ಲಿ ಬರೆದುಕೊಂಡು ಅಭ್ಯಾಸದ ಹಾಳೆಗಳನ್ನು ಭರ್ತಿಮಾಡಿ ಕೊಳ್ಳುವಂತೆ ತಿಳಿಸುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2<br>M-25 | 20 ನಿ | ಗಣಿತ<br>ಸಂಕಲನ | * ಮಕ್ಕಳಿಗೆ ಕೂಡುವ ಚಿಹ್ನೆ '+' ಮತ್ತು '=' ಸಮ ಚಿಹ್ನೆಯನ್ನು ಪರಿಚಯಿಸುವುದು ಮತ್ತು ಅವುಗಳನ್ನು ಓದುವ ವಿಧಾನವನ್ನು ತಿಳಿಸುವುದು. ಮೊತ್ತ 9ಕ್ಕೆ ಮೀರದಂತೆ ಚಿತ್ರ ಮತ್ತು ವಸ್ತುಗಳನ್ನು ಬಳಸಿ ಸಂಕಲನ ಮಾಡುವುದು. | | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :**<br>"ಮೊದಲಿಗೆ ಶಿಕ್ಷಕರು, ಎರಡೂ ತರಗತಿಯ ಮಕ್ಕಳನ್ನು ಒಟ್ಟಿಗೆ ವೃತ್ತಾಕಾರವಾಗಿ ನಿಲ್ಲಿಸಿ, ಮೊದಲೇ ಹೇಳಿಕೊಟ್ಟ "ಒಂದು ಕಾಗೆ ಬಂದಿತು....." ಅಭಿನಯ ಗೀತೆಯನ್ನು ಮಾಡಿಸುವರು.<br>ನಂತರ 2 ವಿದ್ಯಾರ್ಥಿಗಳನ್ನು ಕರೆದು, 2 ಮಿಂಚು ಪಟ್ಟಿಗಳನ್ನು ಬಳಸಿ ಸರಳ ಸಂಕಲನ ಮಾಡುವ ವಿಧಾನವನ್ನು ವಿವರಿಸುತ್ತಾ (20ಕ್ಕೆ ಮೀರದಂತೆ) 2ನೇ ತರಗತಿಯ ಮಕ್ಕಳಿಂದ ಮಾಡಿಸುವರು. | ಗಣಿತ<br>ದಶಕ ಸಹಿತ ಸಂಕಲನ | * ದಶಕವಿರುವಂತೆ ಎರಡಂಕಿ ಅಥವಾ ಮೂರಂಕಿ ಸಂಖ್ಯೆಗಳ ಸಂಕಲನ | | | ಒಂದನೇ ತರಗತಿಯ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 05 ನಿ | | | | ಶಿಕ್ಷಕ | ಮಕ್ಕಳನ್ನು 4–5 ಗುಂಪುಗಳಲ್ಲಿ ಕೂರುವಂತೆ ನಿರ್ದೇಶನ ನೀಡುವರು. | | | | ಶಿಕ್ಷಕ | ಶಿಕ್ಷಕರು ಹಿರೇಮಣಿಗೆ ಪುಟ–73 ಮತ್ತು 75ರ ರಲ್ಲಿನ ಲೆಕ್ಕಗಳನ್ನು ಆಯ್ದ ವಿದ್ಯಾರ್ಥಿಗಳಿಂದ ಕಪ್ಪು ಹಲಗೆಯ ಮೇಲೆ ಮಾಡಿಸುವಂತೆ ಸೂಚನೆ ನೀಡುವರು. |
| | 15 ನಿ | | | ಕಲ್ಲುಗಳು<br>ಬೀಜಗಳು<br>ಮಣಿಗಳು<br>ಚಿತ್ರಗಳ<br>ಮಿಂಚು<br>ಪಟ್ಟಿಗಳು<br>ವಸ್ತುಗಳು | ಶಿಕ್ಷಕರು | **ಕಲಿಕಾಂಶ ಚಟುವಟಿಕೆ :**<br>ಶಿಕ್ಷಕರು ಪ್ರತಿ ಗುಂಪಿನ ಮಕ್ಕಳಿಗೆ ಬೀಜ/ಮಣಿ ಅಥವಾ ವಿವಿಧ ವಸ್ತುಗಳನ್ನು ನೀಡಿ ಆ ವಸ್ತುಗಳನ್ನು ಸೇರಿಸಿದಾಗ ಮೊತ್ತ 9ಕ್ಕೆ ಮೀರದಂತೆ ಕೊಟ್ಟ ವಸ್ತು / ಚಿತ್ರಗಳ ಮಿಂಚುಪಟ್ಟಿಗೆ 1ನ್ನು ಸೇರಿಸುತ್ತಾ ಓದುವ ವಿಧಾನವನ್ನು ಪರಿಚಯಿಸುವರು.<br>ಉದಾ : (1) 1 + 1 = 2 ಒಂದು ಪ್ಲಸ್ ಒಂದು ಸಮ (ಇಸ್ ಈಕ್ವಲ್ ಟು) ಎರಡು.<br>(2) 3 + 1 = 4 ಮೂರು ಪ್ಲಸ್ ಒಂದು ಸಮ (ಇಸ್ ಈಕ್ವಲ್ ಟು) ನಾಲ್ಕು. | | | | ಹಿರೇಮಣಿ | ಹಿರೇಮಣಿಯ ನೇತೃತ್ವದಲ್ಲಿ ಆಯ್ದ ವಿದ್ಯಾರ್ಥಿಗಳು ಕಪ್ಪು ಹಲಗೆಯ ಮೇಲೆ ಲೆಕ್ಕಗಳನ್ನು ಮಾಡುವರು. ಉಳಿದ ವಿದ್ಯಾರ್ಥಿಗಳು ಅದನ್ನು ಪುಸ್ತಕದಲ್ಲಿ ಬರೆದುಕೊಳ್ಳುವರು. |
| | 05 ನಿ | | | | ಶಿಕ್ಷಕ | ಮಿಂಚುಪಟ್ಟಿಗಳನ್ನು ಬಳಸಿ, ಮೇಲಿನಂತೆ ಓದುವ ಚಟುವಟಿಕೆಯನ್ನು ಗುಂಪುಗಳಲ್ಲಿ ಮಾಡುವಂತೆ ನಿರ್ದೇಶನ ನೀಡುವರು. | | | | ಶಿಕ್ಷಕ | ಮೇಲಿನ ಚಟುವಟಿಕೆ ಗಮನಿಸಿ ಸೂಕ್ತ ಸಲಹೆ ನೀಡುವರು. |
| | 30 ನಿ | | | | ಗುಂಪು ಕಲಿಕೆ | ಪ್ರತಿ ವಿದ್ಯಾರ್ಥಿ 1 ರಿಂದ 8ರ ವರೆಗಿನ ವಸ್ತುಗಳಿಗೆ 1ನ್ನು ಸೇರಿಸಿ ಓದುವ ಚಟುವಟಿಕೆ ಮಾಡುವರು. | | | | ಶಿಕ್ಷಕ | ಶಿಕ್ಷಕರು ದಶಕ ಹೇಗೆ ಉಂಟಾಗುತ್ತದೆ ಎಂಬುದನ್ನು ವಿವರಿಸಿ, ಲೆಕ್ಕ ಮಾಡುವ ವಿಧಾನ ಮಕ್ಕಳಿಗೆ ಪರಿಚಯಿಸುವರು.<br>[ಸಂಖ್ಯೆಗಳಲ್ಲಿನ ಬಿಡಿಗಳನ್ನು ಕೂಡಿದಾಗ ಮೊತ್ತ ಹತ್ತಕ್ಕಿಂತ ಹೆಚ್ಚು ಆದಾಗ ಆ ಹತ್ತರ ಒಂದು ಗುಂಪು ಮಾಡಿ ಅದನ್ನು ಹತ್ತರ ಸ್ಥಾನಕ್ಕೆ ವರ್ಗಾಯಿಸಲಾಗುತ್ತದೆ. ಇದನ್ನು ದಶಕ ಕೂಡುವುದು ಎನ್ನುವರು]. ಕೆಲವು ಮಾದರಿ ಲೆಕ್ಕಗಳನ್ನು ಕಪ್ಪು ಹಲಗೆಯ ಮೇಲೆ ಮಾಡಿ ತೋರಿಸುವರು. |
| | 05 ನಿ | | | | ಶಿಕ್ಷಕ | ವಿದ್ಯಾರ್ಥಿಗಳ ಚಟುವಟಿಕೆ ಗಮನಿಸಿ, ಮೆಚ್ಚುಗೆ ಸೂಚಿಸಿ, ಅವರನ್ನು ಪ್ರೋತ್ಸಾಹಿಸುವರು. | | | | | ಕಪ್ಪು ಹಲಗೆಯ ಮೇಲೆ ಮಾಡಿದ ಲೆಕ್ಕವನ್ನು ಪುಸ್ತಕದಲ್ಲಿ ಬರೆದುಕೊಳ್ಳುವಂತೆ ಸೂಚಿಸುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಘಟಕ ಚಟುವಟಿಕೆ | ಕಲಿಕಾ ಉದ್ದೇಶ | ಅಗತ್ಯ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಘಟಕ ಚಟುವಟಿಕೆ | ಕಲಿಕಾ ಉದ್ದೇಶ | ಅಗತ್ಯ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **3** | 10 ನಿ | ಚಟುವಟಿಕೆ<br>**"ದೇಶ ಭಕ್ತಿ ಗೀತೆ" (ಪ್ರಾರ್ಥನೆ)** | * ನನ್ನ ದೇಶ, ನನ್ನ ನಾಡು ಎಂಬ ಭಾವನಾತ್ಮಕ ಮನೋಭಾವವನ್ನು ಬೆಳೆಸಿಕೊಳ್ಳುವರು | ದೇಶಭಕ್ತಿ ಗೀತೆ | ಶಿಕ್ಷಕ | ಶಿಕ್ಷಕರು ಎಲ್ಲಾ ಮಕ್ಕಳನ್ನು ಒಟ್ಟಿಗೆ ಒಂದೇ ತರಗತಿಯಲ್ಲಿ ಕೂರಿಸಿ, ಹಾಡು ಹೇಳಿಸಲು ಅವಶ್ಯಕ ಸಿದ್ಧತೆಗಳನ್ನು ಮಾಡಿಕೊಳ್ಳುವರು. | ಒಂದನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | | | | * ಉದಾ : ಏರುತಿಹುದು ಹಾರುತಿಹುದು<br>ನೋಡು ನಮ್ಮ ಬಾವುಟ<br>ತೋರುತಿಹುದು ಹೊಡೆದು ಹೊಡೆದು<br>ಬಾನಿನಗಲ ಪಟ ಪಟ<br>ಕೇಸರಿ ಬಿಳಿ ಹಸಿರು ಮೂರು<br>ಬಣ್ಣ ನಡುವೆ ಚಕ್ರವು,<br>ಸತ್ಯಶಾಂತಿ ತ್ಯಾಗ ಮೂರ್ತಿ<br>ಗಾಂಧಿ ಹಿಡಿದ ಚರಕವು" |
| | 60 ನಿ | | | | ಶಿಕ್ಷಕ | ನಂತರ ಶಿಕ್ಷಕ ದೇಶಭಕ್ತಿಗೀತೆಯೊಂದನ್ನು (ಸರಳವಾದ) ಒಮ್ಮೆ ಮಾದರಿಯಾಗಿ ಹಾಡಿ ತೋರಿಸುವರು. ನಂತರ, ಒಂದೊಂದೇ ಸಾಲಿನಂತೆ ಹಾಡುತ್ತಾ ಮಕ್ಕಳಿಂದ ಹೇಳಿಸುತ್ತಾ ಪೂರ್ಣ ಹಾಡನ್ನು ಹೇಳಿಕೊಡುವರು*. | | | | | |
| | 10 ನಿ | | | | ಶಿಕ್ಷಕ | ಶಿಕ್ಷಕರು ರಾಗಬದ್ಧವಾಗಿ ಹಾಡನ್ನು ಹೇಳಿಕೊಟ್ಟು, ನಂತರ ಸ್ವತಂತ್ರ್ಯವಾಗಿ ಮಕ್ಕಳಿಂದ ಹೇಳಿಸುವರು. | | | | | |
| **4**<br>**EVS-15** | 10 ನಿ | **ಚಿಂತನ ಅಧ್ಯಾಯ**<br>**ನನ್ನ ದೇಹ** | ದೇಹದ ಭಾಗಗಳನ್ನು ಗುರುತಿಸುವರು | | ಶಿಕ್ಷಕ | ಪಠ್ಯ ಪುಸ್ತಕ ಪುಟ 26 ಮತ್ತು 27ನ್ನು ತೆರೆಯಲು ತಿಳಿಸುವರು ಮತ್ತು ನಂತರದ ಚಟುವಟಿಕೆಗೆ ಅಣಿಯಾಗುವರು. | **ಚಿಂತನ ಅಧ್ಯಾಯ**<br>**ನನ್ನ ದೇಹದ ಭಾಗಗಳು** | ನನ್ನ ದೇಹದ ಭಾಗಗಳನ್ನು ಗುರುತಿಸುವರು ಮತ್ತು ಅವುಗಳ ಕೆಲಸಗಳನ್ನು ತಿಳಿಯುವರು | ಪಠ್ಯ ಪುಸ್ತಕ | ಶಿಕ್ಷಕ | ಪಠ್ಯಪುಸ್ತಕ ಪುಟ –31ನ್ನು ತೆರೆದು ಅದರಲ್ಲಿರುವ ಪ್ರಶ್ನೆಗಳಿಗೆ ಉತ್ತರ ಪಡೆಯಲು ಹಿರೇಮಣಿಗೆ ಸೂಚಿಸುವರು. |
| | 30 ನಿ | | | ಪಠ್ಯ ಪುಸ್ತಕ | ಶಿಕ್ಷಕರು | ಪಠ್ಯಪುಸ್ತಕದ ಪುಟ 26 ಮತ್ತು 27ರ ಚಟುವಟಿಕೆಗಳನ್ನು ಮಕ್ಕಳಿಂದ ವೈಯಕ್ತಿಕವಾಗಿ ಪ್ರಶ್ನಿಸಿ ಉತ್ತರ ಪಡೆಯುತ್ತಾ ಮಕ್ಕಳಿಂದ ಅಗತ್ಯ ಮಾರ್ಗದರ್ಶನ ನೀಡಿ ಅಭ್ಯಾಸದ ಹಾಳೆಗಳನ್ನು ಭರ್ತಿ ಮಾಡಲು ಸಹಾಯ ಮಾಡುವರು. ಪುಟ 28ರ "ಆ" ಚಟುವಟಿಕೆಯನ್ನು ಒಂದೊಂದು ಮಗುವಿನಿಂದ ಮಾಡಿಸಿ ಅದರಲ್ಲಿ ದೇಹದ ಯಾವ ಭಾಗ ಕೆಲಸ ಮಾಡುತ್ತದೆ ? ಎಂಬುದನ್ನು ಮಕ್ಕಳಿಂದ ಹೇಳಿಸುವರು ಎಲ್ಲರಿಗೂ ಸೂಕ್ತ ಅವಕಾಶ ನೀಡುವರು. | | | | ಹಿರೇಮಣಿ | ಮೇಲೆ ಹೇಳಲಾದ ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆ ಪರಿಶೀಲಿಸಿ ಅಗತ್ಯ ಮಾರ್ಗದರ್ಶನ ನೀಡುವರು. | | | | ಶಿಕ್ಷಕ | ಮೇಲಿನ ಚಟುವಟಿಕೆ ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡುವರು. |
| | 30 ನಿ | | | | ಹಿರೇಮಣಿ | ಪುಟಸಂಖ್ಯೆ 22ರ ಚಟುವಟಿಕೆಯನ್ನು ಹಿರೇಮಣಿಯ ನೇತೃತ್ವದಲ್ಲಿ ಪೂರೈಸುವರು. | | | | ಶಿಕ್ಷಕ | ಪಠ್ಯಪುಸ್ತಕ ಪುಟಸಂಖ್ಯೆ 31ರ ಪ್ರಶ್ನೆಗಳಿಗೆ ಉತ್ತರ ಪಡೆಯುತ್ತಾ ನೋಟ್ ಪುಸ್ತಕದಲ್ಲಿ ಉತ್ತರ ಬರೆದುಕೊಳ್ಳಲು ಅಗತ್ಯ ಸಹಾಯ ಮಾಡುವರು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆ ಪರಿಶೀಲಿಸುವರು. | | | ಪಠ್ಯ ಪುಸ್ತಕ | ಶಿಕ್ಷಕ | ಪುಟ 31ರ ಅಭ್ಯಾಸದ ಹಾಳೆಗಳನ್ನು ಭರ್ತಿ ಮಾಡಿಕೊಂಡು ಬರಲು ಹಾಗೂ ಅದೇ ಪುಟದ 'ಈ' ಮತ್ತು 'ಉ' ಚಟುವಟಿಕೆಗಳನ್ನು ನೋಟ್ ಪುಸ್ತಕದಲ್ಲಿ ಬರೆದುಕೊಂಡು ಬರುವಂತೆ ತಿಳಿಸುವರು. |

**"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 KAN-42 | 10 ನಿ | ಕನ್ನಡ ಪದ ಓದು ಅಕ್ಷರ ಕಲಿ–ಹಂತ – 2 (ಜ, ವ, ಮ, ಬ, ನ) | * ವರ್ಣಮಾಲೆಯ ಸರಳ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರುತಿಸುವುದು ಅಚ್ಚಾದ ದಪ್ಪ ಮುದ್ರಿತ ಅಕ್ಷರಗಳನ್ನು ಓದುವುದು. | ಅಕ್ಷರಗಳ ಮಿಂಚು ಪಟ್ಟಿಗಳು | ಶಿಕ್ಷಕ | ಮಕ್ಕಳು ನೋಟ್ ಪುಸ್ತಕದಲ್ಲಿ ಬರೆದು ತಂದಿರುವ ಅಕ್ಷರಗಳನ್ನು ಪರಿಶೀಲಿಸುವರು. | ಕನ್ನಡ ಹಾವಿನ ಹಾಡು | ಹಾಡುಗಳು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತೆ ಒಂಟಿಯಾಗಿ ಹಾಡುವುದು | ಅಭ್ಯಾಸ ಪುಸ್ತಕ | ಶಿಕ್ಷಕ | ಮಕ್ಕಳು ಬರೆದು ತಂದಿರುವ ಅಭ್ಯಾಸದ ಹಾಳೆಗಳನ್ನು ಪರಿಶೀಲಿಸುವರು ಪಾಠವನ್ನು ಓದಿಕೊಳ್ಳಲು ತಿಳಿಸುವರು. |
| | 40 ನಿ | | | | ಶಿಕ್ಷಕ | ಮಿಂಚುಪಟ್ಟಿಯ ಅಕ್ಷರಗಳನ್ನು ಬಳಸಿ ಅಕ್ಷರಗಳನ್ನು ಹೇಳಿಸುವರು ಎರಡೂ/ಮೂರು ಅಕ್ಷರಗಳನ್ನು ಸೇರಿಸಿ ಪದ ರಚನೆಯನ್ನು ಮಕ್ಕಳಿಂದ ಮಾಡಿಸುವರು.<br>* ಮಕ್ಕಳು ಮಿಂಚುಪಟ್ಟಿಯಿಂದ ರಚಿಸಿದ ಪದಗಳನ್ನು ಕಪ್ಪು ಹಲಗೆಯ ಮೇಲೆ ಬರೆದು ಮಕ್ಕಳಿಂದ ಓದಿಸುವರು.<br>* ಪುಟ 34ರ 'ಆ', 'ಇ', 'ಈ' ಚಟುವಟಿಕೆಗಳನ್ನು ಮಾಡಿಸುವರು. | | | | ಸ್ವಕಲಿಕೆ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | ವಾಲ್ ಸ್ಲೇಟ್ | ಶಿಕ್ಷಕ | ಮೇಲಿನ ಚಟುವಟಿಕೆಗಳನ್ನು ವಾಲ್‌ಸ್ಲೇಟಿನಲ್ಲಿ ಬರೆದು ಅಭ್ಯಾಸ ಮಾಡಿಸಲು ತಿಳಿಸುವರು. | | | | ಶಿಕ್ಷಕ | ಮೇಲಿನ ಚಟುವಟಿಕೆ ಪರಿಶೀಲಿಸುವರು. |
| | 25 ನಿ | | | | ಸ್ವಕಲಿಕೆ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. | | | | ಶಿಕ್ಷಕ | ಪಠ್ಯಪುಸ್ತಕ ಪುಟ – 26ರ ಅಭ್ಯಾಸದ ಹಾಳೆಗಳನ್ನು ಭರ್ತಿ ಮಾಡಿಸುವರು. ಶಿಕ್ಷಕರು ಪರಿಶೀಲಿಸಿ ಓದಿಸುವರು ಪುಟ –29ರ "ಬಾ ಬಾ ಗಿಳಿಯೇ" ಪದ್ಯವನ್ನು ಅಭಿನಯ ಪೂರ್ವಕವಾಗಿ ಹಾಡಿಸುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2<br>M-26 | 10 ನಿ | ಗಣಿತ<br>ಸಂಕಲನ | * ಮೊತ್ತ 9ಕ್ಕೆ ಮೀರದಂತೆ ಚಿತ್ರ ಮತ್ತು ವಸ್ತುಗಳನ್ನು ಬಳಸಿ ಸಂಕಲನ ಮಾಡುವುದು "+" ಚಿಹ್ನೆ ಮತ್ತು ಸಮ ಚಿಹ್ನೆಯ ಪರಿಚಯ | ಬೀಜಗಳು<br>ಮಣಿಗಳು,<br>ಕಲ್ಲುಗಳು,<br>ಕಡ್ಡಿಗಳು,<br>ಚಿತ್ರಗಳ<br>ಮಿಂಚು<br>ಪಟ್ಟಿಗಳು | ಶಿಕ್ಷಕ | ಶಿಕ್ಷಕರು 'ಹಿಂದಿನ' ದಿನದಂತೆ ಗುಂಪುಗಳಲ್ಲಿ ಕೂರುವಂತೆ ಮಕ್ಕಳಿಗೆ ಸೂಚನೆ ನೀಡುವರು. ಹಿಂದಿನ ದಿನದ ಚಟುವಟಿಕೆಯನ್ನು ಮುಂದುವರಿಸುವಂತೆ ಸೂಚಿಸುವರು. | ಗಣಿತ<br>ಸಂಕಲನ (ದಶಕ ಸಹಿತ) | * ದಶಕವಿರುವಂತೆ ಎರಡು ಅಥವಾ ಮೂರು ಸಂಖ್ಯೆಗಳನ್ನು ಸಂಕಲನ ಮಾಡುವುದು. | ಕಡ್ಡಿಗಳು<br>ಮಿಂಚುಪಟ್ಟಿಗಳು<br>ದಾಳ | ಶಿಕ್ಷಕ | ಮೊತ್ತ 10ಕ್ಕಿಂತ ಹೆಚ್ಚು ಆದರೆ 20ಕ್ಕೆ ಮೀರದಂತೆ ಸಂಕಲನದ 3 ಲೆಕ್ಕಗಳನ್ನು ಕಪ್ಪು ಹಲಗೆಯ ಮೇಲೆ ಹಾಕಿ ಮಕ್ಕಳಿಗೆ ಬಿಡಿಸಲು ಹೇಳುವರು. |
| | 25 ನಿ | | | | ಗುಂಪು ಕಲಿಕೆ | ವಸ್ತುಗಳಿಗೆ / ಬೀಜ / ಮಣಿ / ಕಡ್ಡಿಗಳಿಗೆ 1 ಸೇರಿಸಿ ಓದುವ ವಿಧಾನವನ್ನು ಅಭ್ಯಾಸ ಮಾಡುವರು. | | | | ಶಿಕ್ಷಕ | ಕಪ್ಪು ಹಲಗೆಯ ಮೇಲೆ ಮಾಡಿರುವ ಲೆಕ್ಕಗಳಲ್ಲಿ, ಸಂಕಲನ ಮಾಡುವ ಮೊದಲು ಹತ್ತುಗಳು ಮತ್ತು ಬಿಡಿಗಳನ್ನು ವಿಭಾಗಿಸಿ ಮತ್ತು ಮೊತ್ತದಲ್ಲಿ ಇರುವ ಹತ್ತುಗಳ ಗುಂಪು ಮತ್ತು ಬಿಡಿಗಳನ್ನು ಬಿಡಿಸಿ ಹೇಳಲು ಸೂಚಿಸಿ, ನಂತರ ಇದೇ ರೀತಿ ಕಡ್ಡಿಗಳನ್ನು ಲೆಕ್ಕ ಮಾಡುವ ವಿಧಾನವನ್ನು ಮಕ್ಕಳಿಗೆ ಪರಿಚಯಿಸುವರು.<br>ಉದಾ :- 24 = 20 + 4<br>+38 = 30 + 8<br>= 50 + 12 = 50 + 10 + 2<br>= 60 + 2 = 62 |
| | 10 ನಿ | | | | ಶಿಕ್ಷಕ | ಮಕ್ಕಳಿಗೆ ನೀಡಿರುವ ಚಟುವಟಿಕೆ ಗಮನಿಸಿ, ಅಗತ್ಯ ಮಾರ್ಗದರ್ಶನ ನೀಡುವರು. | | | | ಶಿಕ್ಷಕ | ಶಿಕ್ಷಕರು ಹಿರೇಮಣಿಗೆ ಲೆಕ್ಕಗಳ ದಾಳ / ಪಟ್ಟಿ ಕೊಟ್ಟು ಪ್ರತಿ ವಿದ್ಯಾರ್ಥಿಯಿಂದ ಕಪ್ಪು ಹಲಗೆಯ ಮೇಲೆ ಲೆಕ್ಕ ಮಾಡಿಸುವಂತೆ ಸೂಚನೆ ನೀಡುವರು. |
| | 25 ನಿ | | | ವಿವಿಧ<br>ವಸ್ತುಗಳು,<br>ಬೀಜಗಳು,<br>ಮಣಿಗಳು,<br>ಕಲ್ಲುಗಳು,<br>ಕಡ್ಡಿಗಳು,<br>ಮಿಂಚು<br>ಪಟ್ಟಿಗಳು. | ಶಿಕ್ಷಕ | ಶಿಕ್ಷಕರು ಮೊತ್ತ 9ಕ್ಕೆ ಮೀರದಂತೆ, ವಿವಿಧ ವಸ್ತುಗಳನ್ನು ಸೇರಿಸಿ ಮೊತ್ತ ಕಂಡು ಹಿಡಿಯುವ ವಿಧಾನವನ್ನು ಮಕ್ಕಳಿಗೆ ಪರಿಚಯಿಸುವರು.<br>4 + 3 = 7<br>ನಾಲ್ಕಕ್ಕೆ ಮೂರು ಸೇರಿಸಿದರೆ ಏಳು ಆಗುತ್ತದೆ.<br>ಕೂಡುವ ಚಿಹ್ನೆ ಹಾಗೂ ಸಮ ಚಿಹ್ನೆ ಬಳಸಿ, ಓದುವ ವಿಧಾನವನ್ನು ಪರಿಚಯಿಸಿ ಅಭ್ಯಾಸ ಮಾಡಿಸುವರು. | | | | ಹಿರೇಮಣಿ | ಹಿರೇಮಣಿಯ ನೇತೃತ್ವದಲ್ಲಿ ಕಪ್ಪುಹಲಗೆಯ ಮೇಲೆ, ಸ್ನೇಹಿತರ (ಸಹಪಾಠಿಗಳ) ಮಾರ್ಗದರ್ಶನ (ಸಹಕಾರ) ದೊಂದಿಗೆ, ಲೆಕ್ಕಗಳನ್ನು ಮಾಡುವರು.<br>ಮಕ್ಕಳು ಲೆಕ್ಕಗಳಿಗೆ ಅನುಗುಣವಾಗಿ ಕಡ್ಡಿಗಳನ್ನು ಬಳಸಿ, ಅವುಗಳನ್ನು ಗುಂಪು ಮಾಡಿ ಲೆಕ್ಕ ಮಾಡುವರು. |
| | 10 ನಿ | | | | | ಮಕ್ಕಳು ಓದುವ ವಿಧಾನ ಪರಿಶೀಲಿಸಿ ಅವಶ್ಯಕ ತಿದ್ದು ಪಡಿ ಮಾಡಿಸುವರು. | | | | | ಮಕ್ಕಳು ಲೆಕ್ಕಗಳನ್ನು ಪರಿಶೀಲಿಸಿ, ಅವಶ್ಯಕ ತಿದ್ದುಪಡಿ ಮಾಡಿ, ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ವಸ್ತು / ಘಟಕ | ಕಲಿಕಾ ಉದ್ದೇಶ | ಬೋಧನಾ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ವಸ್ತು / ಘಟಕ | ಕಲಿಕಾ ಉದ್ದೇಶ | ಬೋಧನಾ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 EVS-26 | 10 ನಿ | ಪಾಠದ ಶೀರ್ಷಿಕೆ ನಮ್ಮ ದೇಹ | ದೇಹದ ಭಾಗಗಳನ್ನು ಗುರುತಿಸುವರು | ದೇಹದ ಕತ್ತರಿಸಿದ ಭಾಗಗಳ ಚಿತ್ರಪಟಗಳು | ಶಿಕ್ಷಕ | ಮಕ್ಕಳನ್ನು ವೃತ್ತಾಕಾರವಾಗಿ ಕೂರಲು ತಿಳಿಸುವರು ಮತ್ತು ಅಗತ್ಯ ಪೂರ್ವಸಿದ್ಧತೆ ಮಾಡಿಕೊಳ್ಳುವರು. | ಪಾಠದ ಶೀರ್ಷಿಕೆ ನಮ್ಮ ದೇಹದ ಭಾಗಗಳು | ನಮ್ಮ ದೇಹದ ಭಾಗಗಳನ್ನು ಗುರುತಿಸುವರು ಮತ್ತು ಅವುಗಳ ಕೆಲಸಗಳನ್ನು ತಿಳಿಯುವರು | ಪಠ್ಯ ಪುಸ್ತಕ | ಶಿಕ್ಷಕ | ಹಿರೇಮಣಿಯು ಪಾಠಸಂಖ್ಯೆ '8'ನ್ನು ಪ್ರತಿ ವಿದ್ಯಾರ್ಥಿಯಿಂದ ಓದಿಸಲು ಸೂಚಿಸುವರು. |
| | 30 ನಿ | | | | ಶಿಕ್ಷಕ | **ಮೌಲ್ಯಮಾಪನ ಹಂತ :** "ನಮ್ಮ ದೇಹ" ಪಾಠದ ಎಲ್ಲಾ ಕಲಿಕಾಂಶಗಳ ಬಗ್ಗೆ ಪ್ರತಿ ವಿದ್ಯಾರ್ಥಿಯನ್ನು ಪ್ರಶ್ನಿಸಿ ಸೂಕ್ತ ಉತ್ತರ ಪಡೆಯುವರು. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಹೆಚ್ಚು ಒತ್ತು ಕೊಡುವರು. | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | | ಶಿಕ್ಷಕ | ಕತ್ತರಿಸಿದ ದೇಹದ ಭಾಗಗಳನ್ನು ಕೊಟ್ಟು ಅವುಗಳನ್ನು ಸೂಕ್ತವಾಗಿ ಜೋಡಿಸಲು ತಿಳಿಸುವರು. ಇದನ್ನು ಪ್ರತಿ ವಿದ್ಯಾರ್ಥಿಯಿಂದ ಮಾಡಿಸುವಂತೆ ಹಿರೇಮಣಿಗೆ ತಿಳಿಸುವರು. | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| | 30 ನಿ | | | | ಹಿರೇಮಣಿ | ಮೇಲೆ ಹೇಳಲಾದ ಚಟುವಟಿಕೆಯಲ್ಲಿ ತೊಡಗಿಸುವರು. | | | | ಶಿಕ್ಷಕ | **ಮೌಲ್ಯಮಾಪನ ಹಂತ :** ಮೇಲಿನ ಚಟುವಟಿಕೆಯ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಅಗತ್ಯ ಮಾರ್ಗದರ್ಶನ ಮಾಡುವರು. ಪಾಠ 8ಕ್ಕೆ ಸಂಬಂಧಿಸಿದಂತೆ ಎಲ್ಲಾ ಕಲಿಕಾಂಶಕ್ಕೆ ಸಂಬಂಧಿಸಿದಂತೆ ಪ್ರತಿ ವಿದ್ಯಾರ್ಥಿಯನ್ನು ವೈಯಕ್ತಿಕವಾಗಿ ಪ್ರಶ್ನಿಸಿ ಮೌಲ್ಯ ಮಾಪನ ಮಾಡುವರು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆ ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡುವರು. | | | | ಶಿಕ್ಷಕ | ಮುಂದಿನ ಅವಧಿಗೆ ಪೂರ್ವ ತಯಾರಿ ಮಾಡಿಕೊಳ್ಳುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ನಿಗದಿ | ವಿಷಯ / ಚಟುವಟಿಕೆ | ಕಲಿಕಾ ಉದ್ದೇಶ | ಕಲಿಕೋಪಕರಣಗಳು / ಸಂಪನ್ಮೂಲ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ / ಚಟುವಟಿಕೆ | ಕಲಿಕಾ ಉದ್ದೇಶ | ಕಲಿಕೋಪಕರಣಗಳು / ಸಂಪನ್ಮೂಲ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **4** | 10 ನಿ | ಸಾ. ಉ. ಉ. ಕಾರ್ಯ<br>"ಮರಳಿನ ಮೇಲೆ ಚಿತ್ರ ಬರೆಯುವುದು" | * ಬೆರಳುಗಳನ್ನು ಉಪಯೋಗಿಸಿ ಮರಳು ಅಥವಾ ನೆನೆಸಿದ ಮಣ್ಣಿನ ಆಕೃತಿಗಳನ್ನು ರಚಿಸುವುದು. | ಮರಳು<br><br>ನೆನೆಸಿರುವ ಮಣ್ಣು | ಶಿಕ್ಷಕ | ಶಿಕ್ಷಕರು ಎಲ್ಲಾ ಮಕ್ಕಳನ್ನು ಸಾಲಾಗಿ ಆಟದ ಮೈದಾನಕ್ಕೆ ಕರೆದೊಯ್ಯುವರು ಮತ್ತು ಮರಳಿನ ಸುತ್ತಲೂ ಮಕ್ಕಳನ್ನು ಸೂಕ್ತ ಸ್ಥಳಾವಕಾಶ ದೊರೆಯುವಂತೆ ಸೂಕ್ತ ಅಂತರಗಳಲ್ಲಿ ಕೂರಿಸುವರು. | | | | | ಒಂದನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 55 ನಿ | | | | ಶಿಕ್ಷಕ | ಈಗ ಮಕ್ಕಳಿಗೆ ತಮ್ಮ ಕಲ್ಪನೆಗೆ ತಕ್ಕಂತೆ, ವಿವಿಧ ಆಕೃತಿಗಳನ್ನು ಮರಳಿನ ಮೇಲೆ, ಬೆರಳಿನ ಸಹಾಯದಿಂದ ರಚಿಸುವಂತೆ ಶಿಕ್ಷಕರು ಸೂಚನೆ ನೀಡುವರು.<br>ಅಗತ್ಯ ಇದ್ದಲ್ಲಿ ಎಂತಹ ಆಕೃತಿಗಳನ್ನು ರಚಿಸಬಹುದೆಂದು, ಶಿಕ್ಷಕರು ಮಾರ್ಗದರ್ಶನ ನೀಡುವರು.<br>ಉದಾ : (1) ಬೆಟ್ಟ, ಗುಡ್ಡ (2) ಸೂರ್ಯ<br>(3) ಹೂವುಗಳು (4) ಮನೆ ಇತ್ಯಾದಿ | | | | | |
| | 15 ನಿ | | | | ಶಿಕ್ಷಕ | ಎಲ್ಲಾ ಮಕ್ಕಳು ರಚಿಸಿರುವ ಮರಳಿನ ಚಿತ್ರಗಳನ್ನು ಸಾಲಾಗಿ ಎಲ್ಲಾ ಮಕ್ಕಳಿಗೆ ವೀಕ್ಷಿಸುವಂತೆ ಸೂಚನೆ ನೀಡುವರು. ನಂತರ ಕೈ-ಕಾಲು, ಮುಖ ತೊಳೆದು ಸ್ವಚ್ಛಗೊಳಿಸಿಕೊಂಡು ತರಗತಿಗೆ ತೆರಳುವಂತೆ ಸೂಚಿಸುವರು. | | | | | |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **1**<br>**KAN-43** | 10 ನಿ | **ಕನ್ನಡ**<br>**ಪದ ಓದು ಅಕ್ಷರ ಕಲಿ, ಹಂತ – 2 (ಜ, ವ, ಮ, ಬ, ನ)** | * ವರ್ಣಮಾಲೆಯ ಸರಳ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರುತಿಸುವರು<br>ಅಚ್ಚಾದ ದಪ್ಪ ಅಕ್ಷರಗಳನ್ನು ಓದುವರು | | ಶಿಕ್ಷಕ | ಮಕ್ಕಳ ಅಭ್ಯಾಸದ ಹಾಳೆಗಳನ್ನು ಪರಿಶೀಲಿಸುವರು. | **ಕನ್ನಡ**<br>**ಹಾವಿನ ಹಾಡು** | * ಹಾಡುಗಳು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವುದು | ಅಭ್ಯಾಸ ಪುಸ್ತಕ | | * ಮಕ್ಕಳ ಅಭ್ಯಾಸದ ಹಾಳೆಗಳನ್ನು ಪರಿಶೀಲಿಸುವರು.<br>* ಹಿರೇಮಣಿ ಪ್ರಶ್ನೆ ಕೇಳಿ ಉತ್ತರ ಪಡೆಯಲು ತಿಳಿಸುವರು. |
| | 35 ನಿ | | | ಪಠ್ಯ ಪುಸ್ತಕ | ಶಿಕ್ಷಕ | **ಅಭ್ಯಾಸ ಹಂತ :**<br>ಮಕ್ಕಳನ್ನು ಒಟ್ಟಾಗಿ ಕೂರಿಸಿಕೊಂಡು ಪಠ್ಯ ಪುಸ್ತಕದ ಪುಟ 34 ಮತ್ತು 35ರ ಅಭ್ಯಾಸ ಚಟುವಟಿಕೆಗಳನ್ನು ಮಾಡಿಸುವರು.<br>* ಅಭ್ಯಾಸದ ಹಾಳೆ ಪುಟ 32, 33ಗಳನ್ನು ಪರಿಶೀಲಿಸುವರು. | | | | ಸ್ವಕಲಿಕೆ | ಮಕ್ಕಳು ಮೇಲಿನ ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | ವಾಲ್ ಸ್ಲೇಟ್ | ಶಿಕ್ಷಕ | ಜ, ವ, ಮ, ಬ, ನ – ಅಕ್ಷರಗಳನ್ನು ವಾಲ್‌ಸ್ಲೇಟಿನಲ್ಲಿ ಬರೆದು ಅಭ್ಯಾಸ ಮಾಡಲು ತಿಳಿಸುವರು. | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| | 30 ನಿ | | | | ಸ್ವಕಲಿಕೆ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು.<br>ನಂತರ ಶಿಕ್ಷಕರು ಪರಿಶೀಲಿಸಿ ಅಗತ್ಯ ಮಾರ್ಗದರ್ಶನ ನೀಡುವರು. | | | ಪಠ್ಯ ಪುಸ್ತಕ | ಶಿಕ್ಷಕ | **ಮೌಲ್ಯಮಾಪನ ಹಂತ :**<br>ಅಗತ್ಯ ಕಲಿಕಾ ಸಾಮಗ್ರಿಗಳನ್ನು ಬಳಸಿ ಮೌಲ್ಯಮಾಪನ ಮಾಡುವರು.<br>* ಪ್ರತಿ ಮಗುವಿನಿಂದ ಪದ್ಯವನ್ನು ಹೇಳಿಸುವರು. |
| **2** | 10 ನಿ | **ಜೀವನ ವಿಜ್ಞಾನ**<br>**"ಚೆಂಡು ಹಿಡಿಯುವ ಆಟ"** | * ದೈಹಿಕ ಚಟುವಟಿಕೆಯನ್ನು ಆಟಗಳನ್ನು ಆಡುವುದರಿಂದ, ಮನೋಲ್ಲಾಸ ಹಾಗೂ ಆನಂದ ಹೊಂದುವ ಮನೋಭಾವನೆ ಬೆಳೆಸಿಕೊಳ್ಳುವುದು. | ವಾಲಿಬಾಲ್ | ಶಿಕ್ಷಕ | ಶಿಕ್ಷಕರು ಮೊದಲಿಗೆ ಎಲ್ಲಾ ಮಕ್ಕಳನ್ನು ಆಟದ ಮೈದಾನಕ್ಕೆ ಕರೆದೊಯ್ಯುವರು. ಎಲ್ಲರನ್ನೂ ವೃತ್ತಾಕಾರವಾಗಿ ನಿಲ್ಲಿಸಿ, ಒಬ್ಬ ವಿದ್ಯಾರ್ಥಿಗೆ ದೊಡ್ಡ ಚೆಂಡೊಂದನ್ನು ಕೊಡುವರು. (ವಾಲಿಬಾಲ್). | | | | | |
| | 60 ನಿ | | | 5–6 ಸಣ್ಣ ಚೆಂಡುಗಳು | ಶಿಕ್ಷಕ | ಮೊದಲಿಗೆ ದೊಡ್ಡ ಚೆಂಡನ್ನು ಪಕ್ಕದಲ್ಲಿರುವ ವಿದ್ಯಾರ್ಥಿಗೆ ವರ್ಗಾಯಿಸುವ ಆಟ ಆಡಿಸುವರು. ಸೀಟಿ ಊದಿದಾಗ ಚೆಂಡು ಯಾರ ಕೈಯಲ್ಲಿರುತ್ತದೋ, ಆ ವಿದ್ಯಾರ್ಥಿಯು ಆಟದಿಂದ ಹೊರಹೋಗಬೇಕು.<br>ಸ್ವಲ್ಪ ಸಮಯದ ನಂತರ ಶಿಕ್ಷಕರು, ಮಕ್ಕಳಿಗೆ ಚೆಂಡನ್ನು ಹಿಡಿಯುವ ಅಭ್ಯಾಸವಾದ ನಂತರ ಅವರನ್ನು ಚಿಕ್ಕ-ಚಿಕ್ಕ ಗುಂಪುಗಳನ್ನಾಗಿ ಮಾಡಿ, ಪ್ರತಿಗುಂಪಿಗೆ ಒಂದು ಚಿಕ್ಕ ಚೆಂಡುಕೊಟ್ಟು, ದೂರ-ದೂರದಲ್ಲಿ ನಿಂತು ಚೆಂಡನ್ನು ಎಸೆದು ಹಿಡಿಯುವ ಆಟ ಆಡಿಸುವರು. | | | | | ಎರಡೂ ತರಗತಿಯ ಮಕ್ಕಳು ಒಂದನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 10 ನಿ | | | | ಶಿಕ್ಷಕ | ಎಲ್ಲಾ ಮಕ್ಕಳನ್ನು ಒಂದೆಡೆಗೆ ಸೇರಿಸಿ, ಎಲ್ಲರೂ ಕೈಕಾಲು ಮುಖ ತೊಳೆದುಕೊಂಡು, ತರಗತಿಗೆ ತೆರಳುವಂತೆ, ಹೇಳುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಘಟಕ | ಸಮಯ ಹಂಚಿಕೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಬೋಧನೋಪಕರಣ / ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಬೋಧನೋಪಕರಣ / ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **3** ಪ.ಅ. **27** | 30 ನಿ | ಪರಿಸರ ಅಧ್ಯಯನ ನನ್ನ ಆಹಾರ | ಆರೋಗ್ಯವನ್ನು ಕಾಪಾಡಲು ಆಹಾರದ ಅವಶ್ಯಕತೆ ಗುರುತಿಸುವರು | ಅಭಿನಯ ಗೀತೆ | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :** "ಹಾಲು ಬೆಣ್ಣೆ ನಮಗಿರಬೇಕು ಸೊಪ್ಪಿನ ಪಲ್ಯ ತಿನ್ನಲು ಬೇಕು. ಮೀನು ಮೊಟ್ಟೆ ಬಳಸಲು ಬೇಕು, ರಾಗಿ ಹಿಟ್ಟಿನ ಮುದ್ದೆಯುಬೇಕು...." ಈ ಅಭಿನಯ ಗೀತೆಯನ್ನು ರಾಗವಾಗಿ ಅಭಿನಯ ಮಾಡಿಸುತ್ತಾ ಎರಡೂ ತರಗತಿಗಳಿಗೂ ಹೇಳಿ ಕೊಡುವರು. | ಪರಿಸರ ಅಧ್ಯಯನ ಆಹಾರ ಏಕೆ ಬೇಕು ? | * ಆಹಾರದಲ್ಲಿ ವೈವಿಧ್ಯತೆ, * ಆಟಕ್ಕಾಗಿ ಕೆಲಸಕ್ಕಾಗಿ ಆಹಾರದ ಅವಶ್ಯಕತೆ ಇದೆ ಎಂದು ತಿಳಿಯುವರು | ಅಭಿನಯ ಗೀತೆ | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :** ಒಂದನೇ ತರಗತಿಯ ಚಟುವಟಿಕೆಯಲ್ಲಿ ತೊಡಗುವರು. |
| | 45 ನಿ | | | ಚಟುವಟಿಕೆಗೆ ಅಗತ್ಯವಾದ ಸಾಮಗ್ರಿಗಳು | ಶಿಕ್ಷಕರು | * ಮೇಲಿನ ಚಟುವಟಿಕೆಯಲ್ಲಿರುವಂತೆಯೇ ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿಕೊಂಡು ಮಕ್ಕಳನ್ನು ವಿವಿಧ ಪ್ರಶ್ನೆಗಳ ಮೂಲಕ ನಮಗೆ ಆಹಾರ ಏಕೆ ಬೇಕು? ಎಂಬುದನ್ನು ತಿಳಿಸುವರು. ಉದಾ : ಬೆಳಗಿನಿಂದ ನೀನು ಏನೇನು ಕೆಲಸ ಮಾಡಿದೆ? ಪ್ರತಿ ಮಕ್ಕಳಿಂದಲೂ ಇದಕ್ಕೆ ಸಂಬಂಧಿಸಿದಂತೆ ಉತ್ತರ ಪಡೆದುಕೊಳ್ಳುವರು. * ಬೆಳಿಗ್ಗೆ ನೀನು ಏನು ಉಪಹಾರ ಸೇವಿಸಿದೆ ? ಈ ಮೇಲ್ಕಂಡಂತೆ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುತ್ತಾ ಅಂತಿಮವಾಗಿ ಮಕ್ಕಳಿಗೆ ಕೆಲಸ ಮಾಡಲು ಆಹಾರ ಬೇಕು ಎಂಬುದನ್ನು ಮನವರಿಕೆ ಮಾಡುವರು. (ಈ ಸಾಮರ್ಥ್ಯಗಳಿಗೆ ಸಂಬಂಧಿಸಿದಂತೆ ಎರಡೂ ತರಗತಿಗೆ ಹೊಂದುವಂತೆ ಇಡೀ ಅವಧಿಗೆ ಸಾಕಾಗುವಷ್ಟು ಚಟುವಟಿಕೆಗಳನ್ನು ಸ್ಥಳೀಯವಾಗಿ ರೂಪಿಸಿಕೊಳ್ಳುವುದು). | | | | | 1ನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 05 ನಿ | | | | ಶಿಕ್ಷಕರು | ಎರಡೂ ತರಗತಿಯ ಮಕ್ಕಳಿಗೆ ಪ್ರತ್ಯೇಕವಾಗಿ ಗೃಹಪಾಠ (ಪೂರಕ ಚಟುವಟಿಕೆ) ನೀಡುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ / ಘಟಕ | ಕಲಿಕಾ ಸಾಮರ್ಥ್ಯ | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ / ಘಟಕ | ಕಲಿಕಾ ಸಾಮರ್ಥ್ಯ | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4 | 10 ನಿ | ಕಾ. ಅ. ಅ. ಕಾರ್ಯ<br>“ಮಣ್ಣಿಂದ ಆಟಿಕೆಗಳನ್ನು ತಯಾರಿಸುವುದು” | * ಮಣ್ಣಿಂದ ವಿವಿಧ ಆಕೃತಿ ಅಥವಾ ಆಟಿಕೆಗಳನ್ನು ತಯಾರಿಸುವ ಸಾಮರ್ಥ್ಯ | ಹದಗೊಳಿಸಿದ ಜೇಡಿಮಣ್ಣು | ಶಿಕ್ಷಕ | ಶಿಕ್ಷಕರು ಎಲ್ಲಾ ಮಕ್ಕಳನ್ನೂ ಸೂಕ್ತ ಅಂತರಗಳಲ್ಲಿ, ವೃತ್ತಾಕಾರವಾಗಿ ಗುಂಪುಗಳಲ್ಲಿ ಕೂರಿಸಿ ಅವರಿಗೆ ಹದವಾಡಲಾದ ಜೇಡಿ ಮಣ್ಣನ್ನು ಗುಂಪುಗಳಿಗೆ ವಿತರಿಸುವರು. | | | | | ಒಂದನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 50 ನಿ | | | ಪೊರಕೆ ಕಡ್ಡಿಗಳು<br>ಬೀಜಗಳು<br>ಮಣಿಗಳು | ಶಿಕ್ಷಕ | ನಂತರ ಶಿಕ್ಷಕರು, ಜೇಡಿಮಣ್ಣನ್ನು ಬಳಸಿ ಕೆಲವು ಸರಳ ವಸ್ತುಗಳನ್ನು ಮಾಡುವ ವಿಧಾನವನ್ನು ಮಕ್ಕಳಿಗೆ ಪರಿಚಯಿಸುವರು ಮತ್ತು ಇದೇ ಮಾದರಿಯಲ್ಲಿ ವಿವಿಧ ವಸ್ತುಗಳನ್ನು ತಮ್ಮ-ತಮ್ಮ ಕಲ್ಪನೆಗೆ ತಕ್ಕಂತೆ ಮಾಡಲು ಹೇಳುವರು.<br>ಅಗತ್ಯವಿದ್ದಲ್ಲಿ ಅವುಗಳಿಗೆ, ಕಡ್ಡಿ ಬೀಜ ಇತರ ವಸ್ತುಗಳನ್ನು ಬಳಸಿಕೊಂಡು, ಮಾಡಿದ ವಿವಿಧ ಆಕೃತಿಗಳನ್ನು ಉತ್ತಮಪಡಿಸಲು ಶಿಕ್ಷಕರು ಮಕ್ಕಳಿಗೆ ಮಾರ್ಗದರ್ಶನ ನೀಡುವರು. | | | | | |
| | 20 ನಿ | | | | ಶಿಕ್ಷಕ | ಮಕ್ಕಳು ಮಾಡಿರುವ ವಸ್ತುಗಳನ್ನು ವೀಕ್ಷಿಸುತ್ತಾ, ನಂತರ ಅವುಗಳನ್ನು ನಿಗದಿತ ಸ್ಥಳದಲ್ಲಿ ಸುರಕ್ಷಿತವಾಗಿ ತೆಗೆದಿಡುವಂತೆ ಶಿಕ್ಷಕರು ಸೂಚನೆ ನೀಡುವರು. ತದನಂತರ ಕೈಗಳನ್ನು ತೊಳೆದುಕೊಂಡು ತರಗತಿಗೆ ತೆರಳುವಂತೆ ಆದೇಶ ನೀಡುವರು. | | | | | |

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ನಿಮಿಷ | ವಿಷಯ ಮತ್ತು ಘಟಕ | ಕಲಿಕಾ ಫಲ | ಬೋಧನೋಪಕರಣ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕ | ಕಲಿಕಾ ಫಲ | ಬೋಧನೋಪಕರಣ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 KAN-44 | 20 ನಿ | ಕನ್ನಡ ಜಡ ಓದು ಅಕ್ಷರ ಕಲಿ : ಹಂತ – 2 | * ವರ್ಣಮಾಲೆಯ ಸರಳ ಅಕ್ಷರಗಳನ್ನು ಒತ್ತಾಗಿ ಮತ್ತು ಬಿಡಿಯಾಗಿ ಗುರುತಿಸುವರು. ಅಕ್ಷರ ದತ್ತ ಅಕ್ಷರಗಳನ್ನು ಓದುವರು. | ಅಭಿನಯ ಗೀತೆ | ಶಿಕ್ಷಕ | ಮಕ್ಕಳು ಎರಡನೇ ತರಗತಿಯ ಚಟುವಟಿಕೆಯಲ್ಲಿ ಭಾಗವಹಿಸುವರು. | ಕನ್ನಡ ತಂಗಿಗೆ ನಾಮಕರಣ | * ಪಠಿತ ಸನ್ನಿವೇಶಗಳಲ್ಲಿ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥಮಾಡಿಕೊಳ್ಳುವರು. * ಮಾರ್ಗದರ್ಶಿತ ಸರಳ ವಾಕ್ಯಗಳನ್ನು ಬರೆಯುವರು. | ಅಭಿನಯ ಗೀತೆ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** "ನಮ್ಮ ಮನೆಯಲೊಂದು ಸಣ್ಣ ಪಾಪವಿರುವುದು....... ............" ಎಂಬ ಅಭಿನಯ ಗೀತೆಯನ್ನು ಮಕ್ಕಳಿಗೆ ಅಭಿನಯ ಪೂರ್ವಕವಾಗಿ ಹೇಳಿಕೊಡುವರು. |
| | 05 ನಿ | | | | ಶಿಕ್ಷಕ | ಅಕ್ಷರಗಳ ಮಿಂಚುಪಟ್ಟಿಗಳನ್ನು ಜೋಡಿಸಿಕೊಂಡು ಚಟುವಟಿಕೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳುವರು. | | | | ಶಿಕ್ಷಕ | ತಂಗಿಗೆ ನಾಮಕರಣ ಪಾಠವನ್ನು ಓದಿಕೊಳ್ಳಲು ತಿಳಿಸುವರು. |
| | 40 ನಿ | | | ಅಕ್ಷರಗಳ ಮಿಂಚುಪಟ್ಟಿ | ಶಿಕ್ಷಕ | **ಮೌಲ್ಯಮಾಪನ ಹಂತ :** * ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿಕೊಂಡು ಅಕ್ಷರಗಳ ಮಿಂಚುಪಟ್ಟಿಗಳನ್ನು ಮಕ್ಕಳ ಮುಂದೆ ಹರಡಿ ಕೇಳಿದ ಅಕ್ಷರವನ್ನು ತೆಗೆದುಕೊಡುವಂತೆ ಸೂಚಿಸುವರು. * ಮಕ್ಕಳ ಎದುರಿಗಿರುವ ಅಕ್ಷರಗಳನ್ನು ಬಳಸಿಕೊಂಡು ಹೇಳಿದ ಪದ ರಚನೆ ಮಾಡಿಸುವರು. (ಎರಡು, ಮೂರು ಮತ್ತು ನಾಲ್ಕು ಅಕ್ಷರಗಳ ಪದಗಳು). * ರಚಿಸಿದ ಪದಗಳನ್ನು ಕಪ್ಪು ಹಲಗೆಯ ಮೇಲೆ ಬರೆಸುವುದು. * ಮೇಲಿನ ಪದಗಳನ್ನು ಬಳಸಿಕೊಂಡು ಸರಳ ವಾಕ್ಯಗಳನ್ನು ರಚಿಸಿ ಹೇಳಿಸುವರು. | | | ಪಠ್ಯ ಪುಸ್ತಕ | ಸ್ವಕಲಿಕೆ | ಮೇಲಿನ ಚಟುವಟಿಕೆಯಲ್ಲಿ ಮಕ್ಕಳು ತೊಡಗುವರು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಹಿರೇಮಣಿ ಪುನರಾವರ್ತಿಸುವಂತೆ ಸೂಚಿಸುವರು. | | | | ಶಿಕ್ಷಕ | ಎಲ್ಲಾ ಮಕ್ಕಳು ಪಠ್ಯಪುಸ್ತಕದೊಂದಿಗೆ ವೃತ್ತಾಕಾರವಾಗಿ ಕೂರಲು ತಿಳಿಸುವರು. |
| | 10 ನಿ | | | | ಹಿರೇಮಣಿ | ಹಿರೇಮಣಿ ಸಹಾಯದಿಂದ ಮೇಲಿನ ಚಟುವಟಿಕೆಯಲ್ಲಿ ತೊಡಗುವರು. | | | | ಶಿಕ್ಷಕ | ಪಠ್ಯಪುಸ್ತಕ ಪುಟ ಸಂಖ್ಯೆ 30ರ "ಪ್ರಾರಂಭದಿಂದ........... ...................... ಮನೆ ಒಳಗೆ ಬರುವನು" ವರೆಗೆ ಪಠ್ಯಭಾಗವನ್ನು ಹೇಳಿಕೊಟ್ಟು ಓದಿಸುವರು. |

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **2** | 10 ನಿ | ಗಣಿತ<br>"ಸಂಕಲನ" | * ಮೊತ್ತ 9ಕ್ಕೆ ಮೀರದಂತೆ ಚಿತ್ರ ಮತ್ತು ವಸ್ತುಗಳನ್ನು ಬಳಸಿ ಸಂಕಲನ<br>* ಕೂಡುವ ಚಿಹ್ನೆ ಮತ್ತು ಸಮ ಚಿಹ್ನೆ ಪರಿಚಯ ಮತ್ತು ಬಳಕೆ. | ಸಂಖ್ಯೆಗಳು ಮಿಂಚುಪಟ್ಟಿಗಳು | ಶಿಕ್ಷಕ | ಹಿಂದಿನ ದಿನದಂತೆ ಮಕ್ಕಳನ್ನು ಗುಂಪುಗಳಲ್ಲಿ ಕುಳ್ಳಿರಿಸಿ, ವಿವಿಧ ವಸ್ತುಗಳ ಮಿಂಚುಪಟ್ಟಿಗಳನ್ನು ತರಗತಿಯ ಮುಂಭಾಗದಲ್ಲಿ ಇರಿಸಿ, ಪ್ರತಿ ವಿದ್ಯಾರ್ಥಿಯಿಂದ 2 ಮಿಂಚುಪಟ್ಟಿ ತೆಗೆಸಿ, ಅವುಗಳನ್ನು ಸಂಕಲನದ ವಾಕ್ಯದಲ್ಲಿ ಹೇಳಿ ನಂತರ ಅವುಗಳ ಮೊತ್ತವನ್ನು ಗಟ್ಟಿಯಾಗಿ ಹೇಳುವಂತೆ ವಿದ್ಯಾರ್ಥಿಗಳಿಗೆ ಸೂಚನೆ ನೀಡವರು. | ಗಣಿತ<br>ಸಂಕಲನ (ದಶಕ ಸಹಿತ) | * ದಶಕವಿರುವಂತೆ ಎರಡು ಅಥವಾ ಮೂರು ಸಂಖ್ಯೆಗಳನ್ನು ಸಂಕಲನ ಮಾಡುವುದು. | ಪಠ್ಯ ಪುಸ್ತಕ | ಶಿಕ್ಷಕ | ಪುಟ – 80ರಲ್ಲಿನ 2 ಲೆಕ್ಕಗಳನ್ನು ಮಾಡುವಂತೆ ವಿದ್ಯಾರ್ಥಿಗಳಿಗೆ ಸೂಚನೆ ನೀಡುವರು.<br>ಮಕ್ಕಳು ಪುಟ – 80ರಲ್ಲಿನ ಖಾಲಿಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬುವರು. |
| | 25 ನಿ | | | | ಗುಂಪು ಕಲಿಕೆ | ಮಾದರಿ :– 3 5<br>ಮೂರಕ್ಕೆ 5ನ್ನು ಕೂಡಿದರೆ 8 ಆಗುತ್ತದೆ ಮೂರು ಪ್ಲಸ್ ಐದು ಸಮ ಎಂಟು $(3 + 5 = 8)$<br>ಮಕ್ಕಳು ಮಾದರಿಯಂತೆ ಚಟುವಟಿಕೆಯಲ್ಲಿ ತೊಡಗುವರು. | | | | ಶಿಕ್ಷಕ | ಈ ಶಿಕ್ಷಕರು ವಿದ್ಯಾರ್ಥಿಗಳಿಗೆ ಸಂಖ್ಯೆಗಳನ್ನು ಬರೆದುಕೊಂಡು, ದಶಕ ತೆಗೆದುಕೊಂಡು ಸಂಕಲನ ಮಾಡುವ ವಿಧಾನ ಪರಿಚಯಿಸುವರು.<br>ಉದಾ : ದಶಕ<br>ಹತ್ತು \| ಬಿಡಿ<br>1 \|<br>2 \| 9<br>+ 1 \| 5<br>4 \| 4<br>ಬಿಡಿಗಳು $9 + 5 = 14$<br>= 1 ಹತ್ತು 4 ಬಿಡಿ<br>ಹತ್ತುಗಳು $2 + 1 + 1 = 4$<br>ಆಯ್ದ ವಿದ್ಯಾರ್ಥಿಗಳಿಂದ ಇದೇ ಮಾದರಿಯಲ್ಲಿ ಲೆಕ್ಕವನ್ನು ಕಪ್ಪುಹಲಗೆಯ ಮೇಲೆ ಮಾಡಿಸುವರು. |
| | 10 ನಿ | | | | ಶಿಕ್ಷಕ | ಮಕ್ಕಳ ಚಟುವಟಿಕೆ ಗಮನಿಸಿ ಅವಶ್ಯಕ ಮಾರ್ಗದರ್ಶನ ನೀಡುವರು. | | | | ಶಿಕ್ಷಕ | ಮಕ್ಕಳ ಚಟುವಟಿಕೆಯನ್ನು ವೀಕ್ಷಿಸಿ ಗಮನಿಸಿ, ಅವರನ್ನು ಪ್ರೋತ್ಸಾಹಿಸುವರು. ಪುಟ – 84ರ ಲೆಕ್ಕ ಮಾಡುವಂತೆ ಸೂಚಿಸುವರು. |
| | 25 ನಿ | | | | ಶಿಕ್ಷಕ | ಶಿಕ್ಷಕರು ಪುಟ 54 ಮತ್ತು 55ರಲ್ಲಿನ ಚಿತ್ರಗಳನ್ನು ಸಂಕಲನದ ರೂಪದಲ್ಲಿ (ಸಂಖ್ಯೆಗಳಲ್ಲಿ) ಬರೆದು ಅದನ್ನು ಓದುವ ವಿಧಾನವನ್ನು ವಿವರಿಸುವ ಲೆಕ್ಕ ಮಾಡಿಸುವರು. (ವಿದ್ಯಾರ್ಥಿಗಳಿಂದ)<br>ನಂತರ ಈ ಲೆಕ್ಕಗಳನ್ನು ತಮ್ಮ ನೋಟ್ ಪುಸ್ತಕಗಳಲ್ಲಿ ಬರೆದುಕೊಳ್ಳುವಂತೆ ಸೂಚಿಸುವರು. | | | ಪಠ್ಯ ಪುಸ್ತಕ | ಹಿರೇಮಣಿ | ಆಯ್ದ ವಿದ್ಯಾರ್ಥಿಗಳು ಕಪ್ಪು ಹಲಗೆಯ ಮೇಲೆ ಪುಟ–84 ರಲ್ಲಿರುವ ಲೆಕ್ಕಗಳನ್ನು ಬರೆದುಕೊಂಡು ಉತ್ತರ ಕಂಡು ಹಿಡಿಯುವರು.<br>ಉಳಿದ ವಿದ್ಯಾರ್ಥಿಗಳು ತಮಗೆ ಲಭಿಸಿದ ಉತ್ತರಗಳನ್ನು ಹೋಲಿಸಿ, ಅಗತ್ಯ ತಿದ್ದುಪಡಿಗಳನ್ನು ಮಾಡಿಕೊಳ್ಳುವರು. |
| | 10 ನಿ | | | | ಶಿಕ್ಷಕ | ವಿದ್ಯಾರ್ಥಿಗಳ ನೋಟ್ ಪುಸ್ತಕಗಳನ್ನು ಪರೀಕ್ಷಿಸಿ ತಿದ್ದುಪಡಿ ಮಾಡುವರು. | | | | ಶಿಕ್ಷಕ | ವಿದ್ಯಾರ್ಥಿಗಳ ಉತ್ತರಗಳನ್ನು ಪರಿಶೀಲಿಸಿ ಸೂಕ್ತ ತಿದ್ದುಪಡಿ ಮಾಡಿ ಅಗತ್ಯ ಮಾರ್ಗದರ್ಶನ ನೀಡುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".